ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ**

**ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ**

# ಗಂಗಾವತಿ

ಪ್ರಧಾನ ಸಂಪಾದಕರು

**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು

**ಡಾ. ಮೃತ್ಯುಂಜಯ ರುಮಾಲೆ**

ಲೇಖಕರು

**ರಮೇಶ ಸಿ. ಬನ್ನಿಕೊಪ್ಪ**

**ಕರ್ನಾಟಕ ಸಾಹಿತ್ಯ ಅಕಾಡೆಮಿ**
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨
ದೂರವಾಣಿ: ೦೮೦–೨೨೨೧೧೭೩೦ / ೨೨೧೦೬೪೬೦
www.karnatakasahithyaacademy.org
ಇ–ಮೇಲ್: sahithya.academy@gmail.com

**GANGAVATI:** An Introducing Book on the Places in Karnataka that Played a Major Role in the Freedom Struggle, Written by Ramesh C. Bannikoppa, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
ಡಾ. ಎಸ್. ಜಿ. ರಾಮದಾಸ ರೆಡ್ಡಿ
ಡಾ. ಮೃತ್ಯುಂಜಯ ರುಮಾಲೆ
ಶ್ರೀ ನರೇಂದ್ರಕುಮಾರ್ ಎಸ್.ಎಸ್.
ಡಾ. ಪ್ರಕಾಶ ಗ. ಖಾಡೆ
ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

**ಲೇಖಕರು**
ರಮೇಶ ಸಿ. ಬನ್ನಿಕೊಪ್ಪ

ಮೊದಲ ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/-
ಪುಟ: ೪೮

ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್


ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೩೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ಸ್ವಾತಂತ್ರ್ಯದ ಅಮೃತಮಹೋತ್ಸವ

ವಿಧಾನಸೌಧ
ಬೆಂಗಳೂರು-560 001



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



## ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.

**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

## ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನಿ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು. ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ,



ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಈ ಕೃತಿಗಳು ಇತಿಹಾಸದ ಶಾಸ್ತ್ರೀಯ ಮಾದರಿ, ವರದಿಯ ಕಥನ ಮಾದರಿ ಹಾಗೂ ಸೃಜನಶೀಲ ಅಭಿವ್ಯಕ್ತಿಯ ಸಾಹಿತ್ಯ ಮಾದರಿಗಳಿಂದ ಕೂಡಿರುವುದು ಗಮನಾರ್ಹ. ಅತೀ ಕಡಿಮೆ ಅವಧಿಯಲ್ಲಿ ಕ್ಷೇತ್ರಕಾರ್ಯ ಮತ್ತು ಅಧ್ಯಯನ ಮಾಡಿ ಮೌಲಿಕವಾದ ಕೃತಿಗಳನ್ನು ಬರೆದುಕೊಟ್ಟಿರುವ ಎಲ್ಲಾ ಲೇಖಕರ, ಸಂಪಾದಕರ ಶ್ರಮ ಸಾರ್ಥಕತೆ ಪಡೆದಿದೆ. ಈ ನಿಟ್ಟಿನ ಅಧ್ಯಯನಗಳಿಗೆ ಈ ಕೃತಿಗಳು ಪ್ರೇರೇಪಿಸುತ್ತವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**
ಅಧ್ಯಕ್ಷರು

# ಲೇಖಕರ ಮಾತು

ಭಾರತದ ಸ್ವಾತಂತ್ರ್ಯ ಹೋರಾಟವು ಅತ್ಯಂತ ರೋಮಾಂಚನಕಾರಿ ಹಾಗೂ ವಿಶಾಲವಾದದ್ದು. ಈ ಹೋರಾಟ ಹಳ್ಳಿಹಳ್ಳಿಗಳಲ್ಲಿಯೂ ಆವರಿಸಿ ಜನರನ್ನು ಹೋರಾಟಕ್ಕೆ ಸಿದ್ಧಗೊಳಿಸಿತು. ಸ್ವಾತಂತ್ರ್ಯದ ಅಮೃತ ಮಹೋತ್ಸವದ ನಿಮಿತ್ಯ ಭಾರತ ಸ್ವಾತಂತ್ರ್ಯ ಹೋರಾಟದ ೭೫ ಸ್ಥಳಗಳ ಮಹತ್ವವನ್ನು ತಿಳಿಸುವ ೭೫ ಕಿರು ಹೊತ್ತಿಗೆಗಳನ್ನು 'ಕರ್ನಾಟಕ ಸಾಹಿತ್ಯ ಅಕಾಡೆಮಿ'ಯವರು ಹೊರ ತರುತ್ತಿರುವ ಕಾರ್ಯ ಶ್ಲಾಘನೀಯವಾದದ್ದು. ಇಂತಹ ಮಹತ್ವದ ಕಾರ್ಯದಲ್ಲಿ **'ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ – ಗಂಗಾವತಿ'** ಎನ್ನುವ ಕಿರುಹೊತ್ತಿಗೆಯ ಕಾರ್ಯವನ್ನು, ನನಗೆ ವಹಿಸಿದ್ದು ತುಂಬಾ ಸಂತೋಷವೆನಿಸುತ್ತದೆ.

ಸಂಪಾದಕರಾದ ಡಾ. ಮೃತ್ಯುಂಜಯ ರುಮಾಲೆ ಅವರಿಗೆ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿಯವರಿಗೆ ತುಂಬು ಹೃದಯದ ಕೃತಜ್ಞತೆಗಳನ್ನು ಸಲ್ಲಿಸುವೆ. ಹಾಗೆ ಪುಸ್ತಕ ರಚಿಸುವಲ್ಲಿ ಹಲವಾರು ಆಧಾರ ಗ್ರಂಥಗಳನ್ನು ನಾನು ಉಪಯೋಗಿಸಿಕೊಂಡಿದ್ದು ಆಯಾ ಸಂಪಾದಕರಿಗೆ, ಲೇಖಕರಿಗೆ, ಸಂಶೋಧಕರಿಗೆ ಋಣಿಯಾಗಿರುತ್ತೇನೆ. ಭಾರತ ಸ್ವಾತಂತ್ರ್ಯಕ್ಕಾಗಿ ತನು–ಮನ–ಧನದಿಂದ ತ್ಯಾಗ ಮಾಡಿದ ಎಲ್ಲಾ ಸ್ವಾತಂತ್ರ್ಯ ಹೋರಾಟದ ಜೀವಿಗಳಿಗೆ ನಮನಗಳನ್ನು ಸಲ್ಲಿಸುವೆ. ವಂದನೆಗಳೊಂದಿಗೆ..

ಜೈಹಿಂದ್

**ರಮೇಶ ಸಿ ಬನ್ನಿಕೊಪ್ಪ, ಹಲಗೇರಿ**

# ಪರಿವಿಡಿ


| | |
|---|---|
| ಶುಭ ಸಂದೇಶ | ೩ |
| ಶುಭ ಸಂದೇಶ | ೫ |
| ಪ್ರಧಾನ ಸಂಪಾದಕರ ಮಾತು | ೭ |
| ಲೇಖಕರ ಮಾತು | ೧೧ |
| ಸ್ವಾತಂತ್ರ್ಯ ಹೋರಾಟದಲ್ಲಿ 'ಗಂಗಾವತಿ' ತಾಲೂಕಿನ ಪಾತ್ರ. | ೧೫ |
| ಭೌಗೋಳಿಕ ಹಿನ್ನೆಲೆ | ೧೬ |
| ಸಾಂಸ್ಕೃತಿಕ ಚಹರೆ | ೧೮ |
| ಐತಿಹಾಸಿಕ ಕುರುಹುಗಳು | ೧೮ |
| ಸಾಹಿತ್ಯದ ಕಂಪು | ೧೯ |
| ವಾಣಿಜ್ಯ ಹಾಗೂ ವ್ಯಾಪಾರ | ೨೦ |
| ರಾಜಕೀಯ ಹೆಗ್ಗಳಿಕೆ | ೨೦ |
| ಶಿಕ್ಷಣ ಸಂಸ್ಥೆಗಳು | ೨೦ |
| ಸ್ವಾತಂತ್ರ್ಯ ಹೋರಾಟದ ಪರಿಸ್ಥಿತಿ | ೨೧ |
| ತುಂಗಭದ್ರಾ ಆಣೆಕಟ್ಟಿಗಾಗಿ ನಡೆದ ರೈತ ಚಳುವಳಿ | ೨೧ |
| ಗಂಗಾವತಿಯಲ್ಲಿ ಆರ್ಯಸಮಾಜ | ೨೨ |
| ಗಾಂಧೀಜೀಯವರ ವಿಧಾಯಾಕ ಕಾರ್ಯಕ್ರಮಗಳು | ೨೨ |
| ಉಪಲದಿನ್ನಿಯ ಮಡಿವಾಳಪ್ಪನ ಹೃದಯವಂತಿಕೆ | ೨೩ |
| ಗಂಗಾವತಿಯಲ್ಲಿ ಗುಡಿಕೈಗಾರಿಕೆ | ೨೪ |
| ಅಧಿವೇಶನಗಳ ಪಾತ್ರ | ೨೫ |
| ಲಕ್ನೋ ಕಾಂಗ್ರೆಸ್ ಅಧಿವೇಶನ | ೨೫ |
| ಲಾಹೋರ್ ಅಧಿವೇಶನ | ೨೫ |

| | |
|---|---|
| ಭಾನಾಪೂರ ಘಟನೆ | ೨೫ |
| ಮುಂಬೈ ಅಧಿವೇಶನ | ೨೬ |
| ರಜಾಕಾರರ ಸಂಘಟನೆ | ೨೬ |
| ಶಿಬಿರಗಳು | ೨೭ |
| ರಮಾನಂದ ತೀರ್ಥರ ಪ್ರವಾಸ | ೨೭ |
| ಹರ್ಡೇಕರ್ ಮಂಜಪ್ಪನವರ ಪ್ರವಾಸ: (೧೯೩೫–೧೯೪೮) | ೨೮ |
| ನಿಜಾಮ ಕರ್ನಾಟಕ ಪರಿಷತ್ ಸ್ಥಾಪನೆ | ೨೮ |
| ಲೇವಿ ವಿರುದ್ಧದ ಆಂದೋಲನ | ೨೯ |
| ಕನಕಗಿರಿಯಲ್ಲಿ ವಾಚನಾಲಯ ಸ್ಥಾಪನೆ | ೩೦ |
| ಕೃಷ್ಣಬಾಯಿಯ ತ್ಯಾಗ | ೩೧ |
| ಆನೆಗೊಂದಿ ಹಾಗೂ ಅಯೋಧ್ಯ ಟೋಲ್ ನಾಕ್ ಲೂಟಿ | ೩೨ |
| ನವಲಿ ಪ್ರಕರಣ | ೩೨ |
| ಮಂತ್ರಾಲಯ ಶಿಬಿರದ ನಂಟು | ೩೩ |
| ಕಲ್ಮಠ ಮಠದ ನೆರವು | ೩೩ |
| ಮರ್ಲಾನಹಳ್ಳಿ ಪ್ರಕರಣ | ೩೪ |
| ಹೋರಾಟದ ರೂಪರೇಷಗಳು | ೩೪ |
| ಆನೆಗೊಂದಿ ಪ್ರಕರಣ | ೩೫ |
| ರಾಷ್ಟ್ರಧ್ವಜ ಹಾರಿಸಿದ್ದರ ಪ್ರತಿಫಲ | ೩೬ |
| ಆಪರೇಷನ್ ಪೋಲೋ | ೩೬ |
| ಹೈದ್ರಾಬಾದ ನಿಜಾಮನ ಶರಣಾಗತಿ | ೩೭ |
| ಗಂಗಾವತಿ ತಾಲೂಕಿನ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರು | ೩೮ |
| ವಿವರ ದೊರೆಯದ ಸ್ವಾತಂತ್ರ್ಯ ಹೋರಾಟಗಾರರು | ೩೮ |
| ಸ್ವಾತಂತ್ರ್ಯ ಹೋರಾಟಕ್ಕೆ ಪ್ರತಿರೋಧ ಒಡ್ಡಿದವರು | ೩೮ |
| ಆಧಾರ ಗ್ರಂಥಗಳು | ೪೦ |
| ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ | ೪೧ |


## ಸ್ವಾತಂತ್ರ್ಯ ಹೋರಾಟದಲ್ಲಿ 'ಗಂಗಾವತಿ' ತಾಲೂಕಿನ ಪಾತ್ರ

ಭಾರತವು ಒಂದು ಪ್ರಾಕೃತಿಕವಾಗಿ, ಸಾಂಸ್ಕೃತಿಕವಾಗಿ ಶ್ರೀಮಂತ ದೇಶವಾಗಿತ್ತು. ಇಲ್ಲಿ ಸಂಪತ್ತಿನ ಬಗ್ಗೆ ಅಪಾರವಾದ ಜ್ಞಾನವಿದ್ದ ಬ್ರಿಟಿಷರು ಈ ದೇಶಕ್ಕೆ ವ್ಯಾಪಾರಕ್ಕಾಗಿ ಬಂದು, ಇಡಿ ದೇಶದ ಚುಕ್ಕಾಣಿಯನ್ನು ಸುಮಾರು ಎರಡುವರೆ ನೂರು ವರ್ಷಗಳ ಕಾಲ ತಮ್ಮ ಹಿಡಿತಕ್ಕೆ ತೆಗೆದುಕೊಂಡಿದ್ದು ದುರಂತವೇ ಸರಿ. ಸ್ವಾತಂತ್ರ್ಯ ಪೂರ್ವದಲ್ಲಿ ದೇಶದಲ್ಲಿ ಮಸ್ಲೀನ್ ಬಟ್ಟೆ, ಬೆಲೆ ಬಾಳುವ ಸಾಂಬಾರು ಪದಾರ್ಥಗಳ ವ್ಯಾಪಾರ ಮಾಡುತ್ತಲೇ ಸಣ್ಣ ಸಣ್ಣ ಸಂಸ್ಥಾನಗಳ ದೇಶಿಯ ಅರಸರನ್ನು, ಜನಸಾಮಾನ್ಯರನ್ನು ಶೋಷಣೆ ಮಾಡಿದ್ದು ಸತ್ಯ. ಇದಕ್ಕೆ ಕರ್ನಾಟಕವೂ ಹೊರತಲ್ಲ. ಅದರಲ್ಲೂ 'ದತ್ತು ಮಕ್ಕಳಿಗೆ ಹಕ್ಕಿಲ್ಲ' ಕಾನೂನು ತೀವ್ರತರವಾದ ಪರಿಣಾಮ ಬಿರಿದ್ದು ಸುಳ್ಳಲ್ಲ. ಬ್ರಿಟಿಷರ ಕಪಿಮುಷ್ಠಿಗೆ ಸಿಕ್ಕ ಜನಸಾಮಾನ್ಯರಿಂದ ಅಲ್ಲಲಿ ಹರತಾಳಗಳು, ಚಳುವಳಿಗಳು ಪ್ರಾರಂಭವಾದವು. ಕರ್ನಾಟಕ ರಾಜ್ಯದಲ್ಲಿ ಸಾಕಷ್ಟು ಹೋರಾಟಗಳು ಜರುಗಿದವು. ಅಂದಿನ ಅಖಂಡ ರಾಯಚೂರ ಜಿಲ್ಲೆಯನ್ನೊಳಗೊಂಡ ಕೊಪ್ಪಳವು ಸಾಕಷ್ಟು ಪ್ರತಿರೋಧವನ್ನು ಒಡ್ಡಿತು. ಮೊದ ಮೊದಲು ಬ್ರಿಟಿಷರ ಕಾನೂನುಗಳನ್ನು ಹಾಗೂ ಹೈದ್ರಾಬಾದ ನಿಜಾಮನ ಕಾನೂನುಗಳನ್ನು ಬಹಿಷ್ಕರಿಸುವುದು,ಸರ್ಕಾರ ವಿಧಿಸಿದ ತೆರಿಗೆಗಳನ್ನು ಕಟ್ಟುವುದನ್ನು ವಿರೋಧಿಸುವುದು, ಹರತಾಳಗಳನ್ನು ಮಾಡುವುದು, ಜನಸಾಮಾನ್ಯರಲ್ಲಿ ಜಾಗೃತಿಯನ್ನು ಮೂಡಿಸಲು ಲಾವಣಿಗಳನ್ನು ಕಟ್ಟಿ ಹಾಡುವುದು, ಮಾರುವೇಷಗಳಲ್ಲಿ ಮುಖಂಡರು ಶಿಬಿರಗಳನ್ನು ನೆಡಸುವುದು ಹೀಗೆ ತರೆಹವಾರಿಯಾಗಿ ಬ್ರಿಟಿಷರನ್ನು ವಿರೋಧಿಸುವ ವಾತಾವರಣವನ್ನು ನಿರ್ಮಾಣ ಮಾಡುವ ಕೆಲಸ ಸದಾ ಕ್ರೀಯಾಶೀಲವಾಗಿ ನಡೆಯಿತು. ದೇಶದಲ್ಲಿ ನಡೆಯುತ್ತಿದ್ದ 'ಗಾಂಧೀಜಿಯವರ ಚರಕ ಮತ್ತು ನೂಲು' ಗಾಢವಾದ ಪ್ರಭಾವ ಬೀರಿತ್ತು. ಬ್ರಿಟಿಷರು ತಂದ ಜನವಿರೋಧಿ ಕಾನೂನುಗಳು, ಮಾನವೀಯತೆಯಿಲ್ಲದ

ತೆರಿಗೆ ಪದ್ಧತಿಗಳು ಮತ್ತಷ್ಟು ಜನರನ್ನು ಕೆರಳಿಸಿತು. ಹಿಂದೂ ಧರ್ಮಕ್ಕೆ ಸಾಧುವಲ್ಲದ ಕೆಲವು ಧಾರ್ಮಿಕ ವಿರೋಧಿ ಕಾನೂನುಗಳು, ಆದೇಶಗಳು ಜನರನ್ನು ಕುದಿಯುವಂತೆ ಮಾಡಿತು. ಇದರಿಂದ ದೇಶಾದ್ಯಾಂತ ಅಲ್ಲಲ್ಲಿ ಜನರು ದಂಗೆ ಎದ್ದರು.ಅಂದಿನ ಕಾಲಘಟ್ಟದಲ್ಲಿ ಬ್ರಿಟಿಷರ ವಿರುದ್ಧ ಹೋರಾಟಕ್ಕೆ ಒಬ್ಬ ಒಳ್ಳೆಯ ನಾಯಕನಿರಲ್ಲಿಲ್ಲ. ಇದು ಕೂಡ ಹೋರಾಟ ಹಿನ್ನಡೆಯಾಗಲು ಕಾರಣವಾಯಿತು. ಮುಂದೊಂದು ದಿನ ದೇಶವೇ ನಮ್ಮ ವಿರುದ್ಧ ತಿರುಗಿ ಬೀಳುತ್ತದೆ ಎಂದು ಬ್ರಿಟಿಷರು ನಿರೀಕ್ಷಿಸಿರಲಿಲ್ಲ.

ಭಾರತದ ಸ್ವಾತಂತ್ರ್ಯವು ಗಾಂಧೀಯುಗದ ಪೂರ್ವ ಕಾಲ ಹಾಗೂ ಗಾಂಧೀಯುಗವೆಂದು ವಿಭಜಿಸುವುದರ ಜೊತೆ ಜೊತೆಗೆ ಮಂದಗಾಮಿಗಳು, ಕ್ರಾಂತಿಕಾರಿಗಳು ಮತ್ತು ತೀವ್ರಗಾಮಿಗಳೆಂದು ಇತಿಹಾಸದಲ್ಲಿ ಗುರುತಿಸಿದ್ದು ಅಷ್ಟೇ ಸತ್ಯ. ಇಂತಹ ಸ್ವಾತಂತ್ರ್ಯ ಹೋರಾಟದ ರೋಚಕ ಕತೆಗಳು ಹಳ್ಳಿ ಹಳ್ಳಿಗಳಲ್ಲಿ ನಡೆದಿವೆ.

**ಭೌಗೋಳಿಕ ಹಿನ್ನೆಲೆ:**

ಕರ್ನಾಟಕ ರಾಜ್ಯದ ಬಹುತೇಕ ಊರುಗಳಲ್ಲಿ ಜನರು ಸ್ವಾತಂತ್ರ್ಯದ ಕಿಚ್ಚು ಹತ್ತಿಸಿದ್ದು, ಆಂಗ್ಲರಿಗೆ ಸಿಂಹಸ್ವಪ್ನವಾಗಿದ್ದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ರೈತರು, ಕಾರ್ಮಿಕರು, ಶಿಕ್ಷಕರು, ವಿದ್ಯಾರ್ಥಿಗಳು, ಉಪನ್ಯಾಸಕರು, ಮಹಿಳೆಯರು, ಯುವಕರು ಇವರಲ್ಲದೇ ಧರ್ಮಾತೀತವಾಗಿ, ಜ್ಯಾತೀತವಾಗಿ, ವರ್ಗರಹಿತವಾಗಿ ಭಾಗವಹಿಸಿದ್ದು ಸ್ವಾತಂತ್ರ್ಯ ಪಡೆಯುವಲ್ಲಿ ಸಫಲವಾಗಲು ಕಾರಣವಾಗಿದೆ. ಒಂದು ಸಮಾಜಮುಖಿ ಹಾಗೂ ರಾಷ್ಟ್ರೀಯವಾದದ ಚಳುವಳಿಯು ಯಶಸ್ವಿಯಾಗುವಲ್ಲಿ ಸಂದೇಹವೇ ಇಲ್ಲ. ಇದಕ್ಕೆ ನಮ್ಮ ದೇಶದ ಸ್ವಾತಂತ್ರ್ಯದ ಹೋರಾಟವೇ ಸಾಕ್ಷಿ.

**ಮೂಲತ:** ರಾಯಚೂರ ಜಿಲ್ಲೆಯಲ್ಲಿದ್ದ ಕೊಪ್ಪಳವು ೧೯೯೮ ರಲ್ಲಿ ಗಂಗಾವತಿ, ಕೊಪ್ಪಳ, ಕುಷ್ಟಗಿ, ಯಲಬುರ್ಗಿ ತಾಲೂಕಗಳನ್ನು ಒಳಗೊಂಡು ನೂತನ 'ಕೊಪ್ಪಳ ಜಿಲ್ಲೆ' ಎಂದು ಉದಯವಾಯಿತು. ಇದಕ್ಕಾಗಿ ಪ್ರಗತಿಪರ ಹೋರಾಟಗಳು ನಡೆದವು. ಎಲ್ಲರ ಆಶಯದಂತೆ ಜಿಲ್ಲೆಯಾಗಿ ಹೊಸ ಕನಸು,



ಹೊಸ ಆಶಯಗಳನ್ನು ಮನದಲ್ಲಿ ಮೂಡಿಸಿತು. ಸುಮಾರು ಎರಡು ನೂರು ಕಿಲೋ ಮೀಟರನಷ್ಟು ದೂರವಿದ್ದ ಜಿಲ್ಲಾ ಕೇಂದ್ರದಿಂದ ಅಂತೂ ಮುಕ್ತಿ ಸಿಕ್ಕಿತು.ಆಡಳಿತಾತ್ಮಕ ಸಂಪರ್ಕಕ್ಕೆ ಜನಸಾಮಾನ್ಯರಿಗೆ ತುಂಬಾ ಹತ್ತಿರವಾಯಿತು. ದಿನೇ ದಿನೇ ಪ್ರಗತಿಪರ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಚಾಲನೆ ದೊರಕಿತು. ಕುಷ್ಟಗಿ, ಯಲಬುರ್ಗಾ ಒಣ ಬೇಸಾಯವನ್ನು ಒಳಗೊಂಡಿದ್ದರೆ ಕೊಪ್ಪಳ ಹಾಗೂ ಗಂಗಾವತಿ ಭಾಗಶ: ತುಂಗಭದ್ರಾ ಆಣೆಕಟ್ಟಿನಿಂದಾಗಿ ನೀರಾವರಿಯನ್ನು ಪಡೆದುಕೊಂಡಿದ್ದವು. ೧೯೯೮ ರಿಂದ ಈಚೆ ಅತಿ ಶೀಘ್ರವಾಗಿ ಅಭಿವೃದ್ಧಿ ಹೊಂದಿದ ತಾಲೂಕು ಕೇಂದ್ರವೆಂದರೆ ಅದು ಗಂಗಾವತಿ. ಕೃಷಿ, ವಾಣಿಜ್ಯ, ಧಾರ್ಮಿಕ, ಸಾಹಿತ್ಯ, ಸಾಂಸ್ಕೃತಿಕ ವಲಯಗಳಲ್ಲಿ ತನ್ನದೇ ಆದ ಛಾಪು ಮೂಡಿಸಿರುವುದು ಸುಳ್ಳಲ್ಲ.

ಕೊಪ್ಪಳ ಜಿಲ್ಲೆಯು ಭೌಗೋಳಿಕವಾಗಿ ಕೃಷಿ ಪ್ರಧಾನವಾದ ಜಿಲ್ಲೆಯಾಗಿದೆ. ಇಲ್ಲಿ ಬಿಳಿಜೋಳ, ಹತ್ತಿ, ಭತ್ತ, ಶೇಂಗಾ, ದ್ವಿದಳ ಧಾನ್ಯಗಳು, ಮುಸುಕಿನ ಜೋಳ ಬೆಳೆಯುತ್ತಿದೆ. ಯಲಬುರ್ಗಾ, ಕೊಪ್ಪಳ, ಕುಷ್ಟಗಿ ಭಾಗಶಃ ಒಣ ಬೇಸಾಯವಿದ್ದು, ಗಂಗಾವತಿ ತಾಲ್ಲೂಕಿನ ಕಾರಟಗಿ, ಶ್ರೀರಾನಗರ, ಗಂಗಾವತಿ, ಆನೆಗೊಂದಿ ಭಾಗಗಳು ತುಂಗಭದ್ರಾ ನದಿಯ ಆಣೆಕಟ್ಟೆಯ ಕಾಲುವೆ ನೀರು ಉಪಯೋಗಿಸಿಕೊಂಡು ಭತ್ತವನ್ನು ಹುಲುಸಾಗಿ ಬೆಳೆಯುತ್ತವೆ. ಕರ್ನಾಟಕ ರಾಜ್ಯದಲ್ಲೇ ಅತಿ ಹೆಚ್ಚು ಭತ್ತ ಬೆಳೆಯುವ ತಾಲೂಕಾಗಿದೆ. ಈ ಕಾರಣಕ್ಕಾಗಿಯೇ ಗಂಗಾವತಿ ತಾಲೂಕು 'ಭತ್ತದ ಕಣಜ' ಎಂದು ಪ್ರಸಿದ್ಧಿಯಾಗಿದೆ. ಈ ಹಿಂದೆ ಇದೆ ಭಾಗದಲ್ಲಿ ಕಬ್ಬು, ಶೇಂಗಾವನ್ನು ಅತಿ ಹೆಚ್ಚು ಬೆಳೆಯುತ್ತಿದ್ದರು.ಕ್ರಮೇಣ ಅವುಗಳನ್ನು ಕೈಬಿಡಲಾಯಿತು. ಈ ಕಾರಣದಿಂದಾಗಿಯೇ ಏಷ್ಯಾ ಖಂಡದಲ್ಲಿ ಎರಡನೆಯ ಅತಿ ದೊಡ್ಡದಾದ ಸಕ್ಕರೆಯ ಕಾರ್ಖಾನೆಯು ಮುಚಲ್ಪಟ್ಟಿತು. ಅತಿಯಾದ ರಸಾಯನಿಕ ಗೊಬ್ಬರವನ್ನು ಉಪಯೋಗಿಸುವುದರಿಂದ ಭೂಮಿಯು ತನ್ನ ಸತ್ವವನ್ನು ಕಳೆದುಕೊಂಡ ಬಗ್ಗೆ ಕೃಷಿ ತಜ್ಞರು ಅಭಿಪ್ರಾಯ ಪಡುತ್ತಾರೆ. ಒಟ್ಟಾರೆ ಭತ್ತವನ್ನು ಹೆಚ್ಚು ಬೆಳೆಯುವ ಕಾರಣಕ್ಕಾಗಿ ಭತ್ತದ ಗಿರಣಿಗಳು ಹೆಚ್ಚು ಸ್ಥಾಪನೆಗೊಂಡಿವೆ. ಮಿಲ್‌ಗಳಿಂದ ಭತ್ತದ ಹೊಟ್ಟು ತೆಗೆಯುವ, ಅಕ್ಕಿಯನ್ನು ಸಂಸ್ಕರಣ ಮಾಡುವ, ಮುಂತಾದ ಕೆಲಸಗಳನ್ನು ಮಾಡುವ ಕಾರ್ಮಿಕರ

ಸಂಖ್ಯೆ ಹೆಚ್ಚಿದ್ದು, ಒಣ ಭೂಮಿ ಪ್ರದೇಶದಿಂದ ದುಡಿಯಲು ಬಂದ ಕಾರ್ಮಿಕರೇ ಇಲ್ಲಿ ಹೆಚ್ಚು. ಹಾಗಾಗಿ ಅಕ್ಕಿ ಹಾಗೂ ಅಕ್ಕಿ ಉತ್ಪನ್ನಗಳನ್ನು ಮಾರಾಟ ಮಾಡುವ ಮಹತ್ವದ ಪ್ರದೇಶದಲ್ಲಿ ಇದು ಒಂದು ಎಂದು ಹೇಳಬಹುದು.

ಇಷ್ಟೇ ಅಲ್ಲದೆ ಗಂಗಾವತಿ ತಾಲೂಕಿನ ವಿಸ್ತೀರ್ಣ ಒಟ್ಟು ೧೩೩೧ ಚ.ಕೀ.ಮೀ ಇದ್ದು, ಈಗಾಗಲೇ ಕಾರಟಗಿ ಹಾಗೂ ಕನಕಗಿರಿ ಎಂಬ ಎರಡು ತಾಲ್ಲೂಕುಗಳು ಉದಯವಾಗಿವೆ. ಆದರೆ ಅಖಂಡ ತಾಲೂಕನ್ನು ಅವಲೋಕಿಸಿದಾಗ ಕನಕಗಿರಿ ಒಣ ಬೇಸಾಯವನ್ನು ಒಳಗೊಂಡಿದೆ. ಅಲ್ಲಿ ಹೆಚ್ಚು ಕಬ್ಬು, ಶೇಂಗಾ, ಸಜ್ಜೆ, ಹುರುಳಿ, ದ್ವಿದಳ ಧಾನ್ಯಗಳನ್ನು ಬೆಳೆಯುತ್ತಾರೆ. ಕೃಷಿಯಲ್ಲಿ ಹೊಸ ಹೊಸ ಪ್ರಯೋಗ ಮಾಡಲು, ಗಂಗಾವತಿಯಲ್ಲಿ ಕೃಷಿ ಪ್ರಯೋಗಾಲಯವಿದೆ.

**ಸಾಂಸ್ಕೃತಿಕ ಚಹರೆ:**

ಭತ್ತದ ನಾಡಾದರೂ ಸಾಂಸ್ಕೃತಿಕವಾಗಿ ಶ್ರೀಮಂತವಾದ ತಾಲೂಕಾಗಿದ್ದು, ರಾಮಾಯಣ ಮಹಾಕಾವ್ಯವನ್ನು ನೆನಪಿಸುವ ಅಂಜನಾದ್ರಿ ಪರ್ವತವಿದ್ದು ಶ್ರೀರಾಮನ ಪರಮಭಕ್ತ ಆಂಜನೇಯ ಹುಟ್ಟಿದ ಜನ್ಮಭೂಮಿಯ ಹಿರಿಮೆ ತಾಲೂಕಿನದು. ಐತಿಹಾಸಿಕ ವಿಜಯನಗರ ಕಾಲದ ಹಿರೇಜಂತಕಲ್‌ನ ಪಂಪಾಪತಿ ಮಂದಿರ, ಎರಡನೇಯ ತಿರುಪತಿ ಎಂದೇ ಕರೆಯಲಾಗುವ ಕನಕಗಿರಿಯ ಕನಕಾಚಲಪತಿಯ ದೇವಸ್ಥಾನವಿರುವುದು, ನೀಲಕಂಠೇಶ್ವರ ದೇವಸ್ಥಾನ ಮತ್ತೊಂದು ಪ್ರಮುಖ ಸಾಂಸ್ಕೃತಿಕ ಕೇಂದ್ರವಾಗಿದೆ. ಹೇಮಗುಡ್ಡದ ದುರ್ಗಾದೇವಿ, ಗಂಗಾವತಿ ಚನ್ನಬಸವೇಶ್ವರ ದೇವಸ್ಥಾನ, ದುರ್ಗಾದೇವಿಯ, ಕಾರಟಗಿಯ ಬೀರದೇವರ, ಶ್ರೀದೇವಿಯ ಗುಡ್ಡ,ಶರಣಬಸವೇಶ್ವರರ ದೇವಸ್ಥಾನಗಳಿವೆ. ಮಸೀದಿಗಳು, ಚರ್ಚುಗಳು ಇದ್ದು ಭಾವೈಕ್ಯತೆಯಿಂದ ಕೂಡಿದ ಸಾಂಸ್ಕೃತಿಕ ಕೇಂದ್ರವಾಗಿದೆ.

**ಐತಿಹಾಸಿಕ ಕುರುಹುಗಳು:**

ಗಂಗಾವತಿ ತಾಲೂಕು ಐತಿಹಾಸಿಕವಾಗಿ ಮಹತ್ವದ ಪಾತ್ರವನ್ನು ವಹಿಸಿದೆ. ಇಲ್ಲಿ ಇತಿಹಾಸದ ಪ್ರಮುಖ ಕಾಲಘಟ್ಟದ ಚಹರೆಗಳನ್ನು ಕಾಣಬಹುದಾಗಿದೆ.



ಕುಮಾರ ರಾಮನ ಬೆಟ್ಟ, ನಿಶಾನಗಡ, ಅಲ್ಲದೆ ಹಿರೇಬೆಣಕಲ್ಲು ಗ್ರಾಮದ ಬಳಿ ಏಳುಗುಡ್ಡಗಳ ಗವಿವರ್ಣಚಿತ್ರಗಳು ಅತಿ ಸೂಕ್ಷ್ಮಶಿಲಾ ಯುಗದವೆಂದು ಹಾಗೂ ಕ್ರಿ.ಶ.ಪೂ ೧೦,೦೦೦ ದಿಂದ ಕ್ರಿ.ಶ.ಪೂ, ೪೦೦೦ ಪೂರ್ವ ಕಾಲದವೆಂದು ಪ್ರಾಕ್ತನ ತಜ್ಞರು ಗುರುತಿಸಿದ್ದಾರೆ. ಆದಿಕಾಲದ ಮಾನವನ ಹೆಜ್ಜೆ, ಬದುಕಿನ ಲಕ್ಷಣಗಳನ್ನು ಸಾರುವ ಗುರುತುಗಳಿವೆ. ಹಿರೇಬೆಣಕಲ್‌ನ ಮೋರೇರ್ ಗುಡ್ಡವು ಪ್ರಾಗೈತಿಹಾಸಿಕದ ಮಹತ್ವದ ಸ್ಥಳಗಳಲ್ಲಿ ಒಂದಾಗಿದೆ. ತಾಲೂಕಿನ ಕನಕಗಿರಿಯ ಬಳಿ ಹಸಿರು ಬೆಣಚುಕಲ್ಲಿನ ಕುಹರುಗಳಿವೆ. ಆದರೆ ಅವು ಅಷ್ಟೊಂದು ಗುಣಮಟ್ಟವನ್ನು ಹೊಂದಿರದ ಕಾರಣ ಗಣಿಗುತ್ತಿಗೆ ನಿಂತಿದೆ ಎಂದು ಹೇಳಬಹುದು. ಗಂಗಾವತಿ ತಾಲೂಕಿನ ಆನೆಗೊಂದಿ ರಾಜಮನೆತನದ ಆಳ್ವಿಕೆಯ ಬಹುಮುಖ್ಯವಾದ ರಾಜಧಾನಿ ಎಂದು ಗುರುತಿಸಲ್ಪಟ್ಟಿದೆ. ಲಲಿತ ಮಹಲ್ ಅರಮನೆಯು ಆನೆಗೊಂದಿಯ ಆಕರ್ಷಣೆಯ ಸ್ಥಳವಾಗಿದೆ. ಹಾಗೆಯೇ ತಾಲೂಕಿನ ಇನ್ನೊಂದು ಪ್ರಮುಖ ರಾಜಮನೆತನದ ಆಳ್ವಿಕೆಯ ಸ್ಥಳವೆಂದರೆ ಕನಕಗಿರಿ ಸಂಸ್ಥಾನ. ಮತ್ತೊಂದು ಸಾಮ್ರಾಜ್ಯ ಎಂದರೆ ನಾಯಕ ಮನೆತನದ ಹುಲಿಹೈದರನಲ್ಲಿ ಕಾಣಬಹುದಾಗಿದೆ. ಅಲ್ಲದೆ ವಿಜಯನಗರ ಸಾಮ್ರಾಜ್ಯದ ಆಡಳಿತದ ಪ್ರಭಾವ ಸಾಕಷ್ಟು ಪ್ರಮಾಣದಲ್ಲಿ ಪ್ರಭಾವ ಬೀರಿದೆ. ಗಂಗಾವತಿ ತಾಲೂಕು ಐತಿಹಾಸಿಕ ಪ್ರಮುಖ ಕೇಂದ್ರವೆಂದು ಗುರುತಿಸಬಹುದು. ಗಂಗಾವತಿ ತಾಲೂಕಿನ ಬೂದಗುಂಪಾ, ಆಗೋಲಿಗಳಲ್ಲಿ ಬದಾಮಿ ಚಾಲುಕ್ಯರ ಕಾಲದ ಶಾಸನಗಳು ಬೆಳಕಿಗೆ ಬಂದಿವೆ ಎಂದು ಗಂಗಾವತಿ ಇತಿಹಾಸಕಾರರಾದ ಡಾ. ಶರಣಬಸಪ್ಪ ಕೋಲ್ಕಾರವರು ಅಭಿಪ್ರಾಯಪಡುತ್ತಾರೆ. ಅಲ್ಲದೆ ಇನ್ನೊಂದು ಪ್ರಮುಖವಾದ ಗಂಗಾವತಿಯ ಶಾಸನವು ಕ್ರಿ.ಶ. ೯೮೮ ರಲ್ಲಿ ತುಂಗಭದ್ರೆಯ ನದಿಯ ದಡದ ಪಂಪಾಬೀಡಿನಲ್ಲಿದ್ದ ಸಂಗತಿಯನ್ನು ಹೇಳುತ್ತದೆ.

**ಸಾಹಿತ್ಯದ ಕಂಪು:**

ಸಮೃದ್ಧವಾದ ಭತ್ತ ಬೆಳೆಯುವ ನಾಡಾದರೂ ಸಾಹಿತ್ಯದಲ್ಲೂ ಆಸಕ್ತಿಯಿರುವ ಶ್ರೀಮಂತ ತಾಲ್ಲೂಕು. ಹರಿದಾಸರು, ಶರಣರು, ಮೌಲ್ವಿಗಳು, ವಚನಕಾರರು, ಕಲಾವಿದರು, ಕವಿಗಳು ನೆಲಸಿದ ಬೀಡಾಗಿದೆ. ಪತ್ರಿಕಾ ಸಾಹಿತ್ಯ, ಅಂಕಣಕಾರರು, ಹೋರಾಟಗಾರರ ಬದುಕಿ ಬಾಳಿದ್ದಾರೆ. ರಾಜ

ಪುರೋಹಿತರಂತಹ ಧೀಮಂತ ಸಾಹಿತಿಗಳಿಂದ ಪ್ರಾರಂಭವಾದ ಸಾಹಿತ್ಯ ಪರಂಪರೆಯು, ೨೦೧೧ ರಲ್ಲಿ ಗಂಗಾವತಿ ನಗರದಲ್ಲಿ ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ನಾಡಿನದ್ಯಾಂತ ಹೆಸರು ಮಾಡಿತು. ಗಂಗಾವತಿ ವಾಣಿಜ್ಯ ನಗರವೂ ಹೌದು.

**ವಾಣಿಜ್ಯ ಹಾಗೂ ವ್ಯಾಪಾರ:**

ಭತ್ತ ಪ್ರಮುಖ ಬೆಳೆ ಆಗಿರುವುದರಿಂದ ಮಿಲ್‌ಗಳ ಸಂಖ್ಯೆಯು ಅಷ್ಟೇ ಹೆಚ್ಚಾಗಿವೆ. ಭತ್ತದ ಉಪಉತ್ಪನ್ನಗಳನ್ನು ತಯಾರಿಸುವ ಹಲವಾರು ಅಕ್ಕಿ ಗಿರಣಿಗಳಿವೆ. ತಾಲೂಕಿನ ನವಲಿ ಗ್ರಾಮದ ಬಳಿ 'ರೈಸ್ ಟೆಕ್ ಪಾರ್ಕ್' ಸ್ಥಾಪಿಸಿದ ಕರ್ನಾಟಕ ಸರ್ಕಾರವು ರೈತರ ನೆರವಿಗೆ ಸಹಾಯ ಮಾಡಿದೆ. ದೊಡ್ಡ ದೊಡ್ಡ ಪ್ರಮಾಣದ ಲೇವಾದೇವಿದಾರರು ಅಂತರರಾಜ್ಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಅಕ್ಕಿಯ ವ್ಯಾಪಾರ ವಹಿವಾಟು ನಡೆಸುತ್ತಿದ್ದಾರೆ.

**ರಾಜಕೀಯ ಹೆಗ್ಗಳಿಕೆ:**

ಕೊಪ್ಪಳ ಜಿಲ್ಲೆಯಲ್ಲಿಯೇ ಗಂಗಾವತಿ ತಾಲೂಕು ರಾಜಕೀಯವಾಗಿ ಎರಡು ವಿಧಾನಸಭಾ ಕ್ಷೇತ್ರಗಳನ್ನು ಹೊಂದಿದೆ. ಅನೇಕ ರಾಜಕೀಯ ಮುತ್ಸದ್ಧಿಗಳು ಸಾಕಷ್ಟು ಸಲ ಸರ್ಕಾರದಲ್ಲಿ ಸಚಿವರಾಗಿಯೂ ಕೆಲಸ ಮಾಡಿದ್ದು, ಅಭಿವೃದ್ಧಿಗೆ ಪೂರಕವಾದ ಕೆಲಸಗಳನ್ನು ಮಾಡಿದ್ದಾರೆ. ಗಂಗಾವತಿ ತಾಲೂಕಿನಲ್ಲಿ ಗಂಗಾವತಿ ನಗರಸಭೆ, ಕಾರಟಗಿ ಪುರಸಭೆ, ಕನಕಗಿರಿ ಪಟ್ಟಣ ಪಂಚಾಯತಿ ಇದ್ದು, ಅನೇಕ ಹಳ್ಳಿಗಳಲ್ಲಿ ಜಿಲ್ಲಾ ಪಂಚಾಯತಿ, ತಾಲೂಕ ಪಂಚಾಯತಿ, ಗ್ರಾಮ ಪಂಚಾಯತಿ ಸ್ಥಳೀಯ ಆಡಳಿತದಿಂದ ಸಾಕಷ್ಟು ಅಭಿವೃದ್ಧಿಯನ್ನು ಸಾಧಿಸಿವೆ.

**ಶಿಕ್ಷಣ ಸಂಸ್ಥೆಗಳು:**

ಇಲ್ಲಿ ಅನೇಕ ಸರ್ಕಾರಿ ಶಿಕ್ಷಣ ಸಂಸ್ಥೆಗಳಿದ್ದು, ಇಂಜಿನೀಯರಿಂಗ್ ಕಾಲೇಜ್, ಕಿರು ಕೈಗಾರಿಕಾ ಸಂಸ್ಥೆಗಳು, ಕೃಷಿ ಪ್ರಯೋಗಾಲಯದ ರೈತರ ತರಬೇತಿ ಕೇಂದ್ರವಿದೆ.ಕೊಪ್ಪಳ ಜಿಲ್ಲೆಯಲ್ಲಿಯೇ ಅತಿಹೆಚ್ಚು ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಹೊಂದಿದೆ. ಪ್ರಾಥಮಿಕ ಹಂತದಿಂದ ಪದವಿ ಕಾಲೇಜುಗಳಿದ್ದು, ಶಿಕ್ಷಣ ಪ್ರಸರಣದಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ.



**ಸ್ವಾತಂತ್ರ್ಯ ಹೋರಾಟದ ಪರಿಸ್ಥಿತಿ:**

ಜಿಲ್ಲೆಯಲ್ಲಿ ವ್ಯವಸಾಯವು ಪ್ರಧಾನವಾಗಿತ್ತು. ಇಡೀ ಜಿಲ್ಲೆಯ ಬಹುತೇಕ ಗ್ರಾಮಗಳು ಮಳೆಯನ್ನೇ ಅವಲಂಬಿಸಿತು. ಗಂಗಾವತಿ ತಾಲೂಕ ಮಾತ್ರ ರಾಯರ ಕಾಲುವೆ ಮುಖಾಂತರ ಹಳೆಯ ಮಾಗಣಿ ಪ್ರದೇಶದಲ್ಲಿ ನೀರಾವರಿ ಮಾತ್ರ ಇತ್ತು. ಇಲ್ಲಿ ಸಾಮಾನ್ಯವಾಗಿ ಭತ್ತವು ಪ್ರಮುಖ ಬೆಳೆಯಾಗಿತ್ತು. ಇದರಿಂದ ಒಣಪ್ರದೇಶದ ಜನರು ಇಲ್ಲಿಗೆ ವಲಸೆ ಬಂದು ಬದುಕು ಕಟ್ಟಿಕೊಳ್ಳುತ್ತಿದ್ದರು. ಗಂಗಾವತಿಯಲ್ಲಿ ಬಹುತೇಕ ದೇಸಾಯಿಗಳ ಮನಸ್ವಿ ಆಡಳಿತವಿತ್ತು ಮತ್ತು ಎಲ್ಲಾ ಹೈದ್ರಾಬಾದ ಪ್ರಾಂತ್ಯದ ಗಡಿಗೆ ಸೇರಿಕೊಂಡಿದ್ದು ಇವು ನವಾಬರ ಅತ್ಯಂತ ಅಲಕ್ಷ್ಯದ ತಾಣಗಳಾಗಿದ್ದವು. ಇಲ್ಲಿ ರೈತರ ಕಷ್ಟಗಳಿಗೆ ನಿಜಾಮನಾಗಲಿ, ಸಂಬಂಧಸಿದ ಮಂತ್ರಿಗಳಾಗಲಿ ಗಮನಹರಿಸುತ್ತಿರಲ್ಲಿಲ್ಲ. ಅಧಿಕಾರಿಗಳು ಭ್ರಷ್ಟತೆಯಿಂದ ಅಟ್ಟಹಾಸದಿಂದ ಜನಸಾಮಾನ್ಯರನ್ನು ಶೋಷಣೆ ಮಾಡುತ್ತಿದ್ದರು. ಇದರಿಂದ ಅನೇಕ ವರ್ಷಗಳ ಕಾಲ ಬರಗಾಲವನ್ನು ಎದುರಿಸುವುದು ಸಾಕಾಗಿತ್ತು. ಇದರಿಂದ ನವಾಬನಿಗೆ ಹೇಗಾದರೂ ಮಾಡಿ ಮನವಿ ಮಾಡಬೇಕೆಂದು ಕೊಪ್ಪಳದ ಶ್ರೀ ಶಿರೂರು ವೀರಭದ್ರಪ್ಪನವರು ನವಾಬರಿಗೆ ತಂತಿ ಸಂದೇಶವನ್ನು ಕಳುಹಿಸಿದರು. ನಂತರ ಬರಗಾಲ ನಿವಾರಣೋಪಾಯ ಸಂಘವನ್ನು ಸ್ಥಾಪಿಸಿತು. ಅಲ್ಲದೆ ಮುಂದೆ ತುಂಗಭದ್ರ ನದಿಗೆ ಆಣೆಕಟ್ಟು ಕಟ್ಟುವ ಬಗ್ಗೆ ಸ್ಪಷ್ಟವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿತು. ಸಮಿತಿಯಲ್ಲಿದ್ದ ಶ್ರೀ ಆರ್ ಜಿ ಜಾಗೀರದಾರರೂ ಹಾಗೂ ಶ್ರೀ ವೀರಭದ್ರಪ್ಪ ಶಿರೂರವರು ಪ್ರಮುಖರಾಗಿದ್ದರು.

**ತುಂಗಭದ್ರಾ ಆಣೆಕಟ್ಟಿಗಾಗಿ ನಡೆದ ರೈತ ಚಳುವಳಿ:**

ಜಿಲ್ಲೆಯಲ್ಲಿ ಸದಾ ಕಾಲ ಕಾಲಕ್ಕೆ ಬಂದೆರಗುತ್ತಿದ್ದ 'ಬರಗಾಲ'ವೆಂಬ ಪೆಂಡಭೂತವನ್ನು ಹೇಗಾದರೂ ಮಾಡಿ ಹೋಗಲಾಡಿಸಬೇಕೆಂಬ ಮಹತ್ವದ ನಿರ್ಧಾರವು ತುಂಗಭದ್ರ ನದಿಗೆ ಆಣೆಕಟ್ಟು ಕಟ್ಟುವ ಆಲೋಚನೆ ಮೂಡಿತು. ಇದಕ್ಕಾಗಿ ಜಿಲ್ಲೆಯ ರೈತರು ಸಾಕಷ್ಟು ಕಷ್ಟಪಟ್ಟು ರೈತ ಮುಖಂಡರ ಮೂಲಕ ನಿಜಾಮನಿಗೆ ಮನವಿ ಸಲ್ಲಿಸಿದರು. ೧೯೩೦, ೧೯೩೩, ೧೯೩೫, ೧೯೩೭, ೧೯೪೧ ರಲ್ಲಿ ನೆಡೆದ ಬರಗಾಲಗಳು ರೈತರನ್ನು, ಜನಸಾಮಾನ್ಯರನ್ನು ತತ್ತರಿಸುವುಂತೆ ಮಾಡಿದವು. ಕೊಪ್ಪಳದಲ್ಲಿ ಶ್ರೀ ವೀರಭದ್ರಪ್ಪ ಶಿರೂರವರ

ನಾಯಕತ್ವದಲ್ಲಿ ಗಂಗಾವತಿಯಿಂದ ನೂರಾರು ರೈತರು ಭಾಗವಹಿಸಿ ತಹಸಿಲ್ದಾರರಿಗೆ ೧೯೪೧ ರಲ್ಲಿ ತುಂಗಭದ್ರ ನದಿಗೆ ಆಣೆಕಟ್ಟು ಕಟ್ಟುವಂತೆ ಮನವಿ ಸಲ್ಲಿಸಿದರು. ನಿಜಾಮನ ಮೇಲೆ ಸಾಕಷ್ಟು ಒತ್ತಡವನ್ನು ತಂದರು.ಇದೊಂದು ದೊಡ್ಡ ಹೋರಾಟವಾಗಿತ್ತು. ೧೯೪೫ ರಲ್ಲಿ ಹೊಸಪೇಟೆ ಬಳಿ ತುಂಗಭದ್ರಾ ನದಿಗೆ ಆಣೆಕಟ್ಟಿಗೆ ಅಡಿಗಲ್ಲು ನಿಜಾಮರ ಮಗ ಅಜಂ ಸಾಹೇಬರಿಂದ ಇಡಲ್ಪಟಿತ್ತು. ಅದು ೧೯೫೩ ರಲ್ಲಿ ಪೂರ್ಣಗೊಂಡಿತು.

**ಗಂಗಾವತಿಯಲ್ಲಿ ಆರ್ಯಸಮಾಜ :**

ಅಂದು ಹಿಂದುಗಳ ಮೇಲೆ ನಿರಂತವಾಗಿ ಶೋಷಣೆ ನೆಡೆಯುತ್ತಿತ್ತು. ನಿಜಾಮನು ತಂದ ಹೊಸ ಕಾಯ್ದೆಗಳಿಂದಾಗಿ ಹಿಂದುಗಳು ಮುಸಲ್ಮಾನರ ಭೂಮಿಯನ್ನು ಖರೀದಿಸದಂತೆ,ಕೇವಲ ಹರಿಜನರು ಮಾತ್ರ ಖರೀದಿಸಬಹುದು ಎಂಬ ಆದೇಶವು ಮಾತಾಂತರಕ್ಕೆ ಕಾರಣವಾಯಿತು.ಇದರಿಂದ ಜಿಲ್ಲೆಯಲ್ಲಿ ಆರ್ಯ ಸಮಾಜ ಸಂಸ್ಥೆಯು ಚಳುವಳಿಯ ರೂಪದಲ್ಲಿ 'ಭಾರತವು ಭಾರತಿಯರಿಗಾಗಿ' ಎಂಬ ಘೋಷವಾಕ್ಯವನ್ನು ಸಾರಿ ಮತಾಂತರವನ್ನು ತಡೆದರು. ಅಳವಂಡಿಯ ಶಿವಮೂರ್ತಿಸ್ವಾಮಿಗಳು ಹಾಗೂ ವೀರಭದ್ರಪ್ಪ ಶಿರೂರವರು ಹಿಂದೂಗಳಲ್ಲಿ ಧಾರ್ಮಿಕ ಭಾವನೆಯನ್ನು ಜಾಗೃತಿಗೊಳಿಸಿ, ಸ್ವಾತಂತ್ರ್ಯಕ್ಕೆ ಕರೆ ನೀಡಿದರು. ಗಂಗಾವತಿಗೂ ಬಂದು ಜಾಗೃತಿಗೊಳಿಸಿದರು. ಗಂಗಾವತಿಯ ಆರ್.ಎಂ. ಗಂಗಾವತಿಯವರು ಉಸ್ಮಾನಿಯ ವಿಶ್ವವಿದ್ಯಾಲಯದಿಂದ ತನ್ನ ಸಹಪಾಠಿಗಳೊಂದಿಗೆ ಕೇಶವ ರಾವ್ ಶ್ರೀಖಂಡೆ, ಜೆ.ಕೆ. ಪ್ರಾಣೇಶಾಚಾರ್ಯ, ಬಿ.ವಿ. ದೇಸಾಯಿ ಮೊದಲಾದವರು ಉಚ್ಚಾಟನೆಯಾದವರು. ಇವರು ಆರ್ಯ ಸಮಾಜದ 'ವಂದೇ ಮಾತರಂ' ಚಳುವಳಿಯ ಪ್ರಮುಖ ಮುಂದಾಳುಗಳಾಗಿದ್ದರು. ಹೀಗೆ ಗಂಗಾವತಿಯಲ್ಲಿ ಮತಾಂತರ ತಡೆಗೆ ಸಾಕಷ್ಟು ಪ್ರಯತ್ನಗಳು ನಡೆದವು. 'ವೇದಗಳಿಗೆ ಹಿಂತಿರುಗಿ' ಎಂಬ ಆರ್ಯಸಮಾಜದ 'ಶುದ್ಧಿಕರಣ' ಚಳುವಳಿಗೆ ಮಹತ್ವ ಬಂದಿತು.

**ಗಾಂಧೀಜೀಯವರ ವಿಧಾಯಾಕ ಕಾರ್ಯಕ್ರಮಗಳು :**

ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರೀಯವಾಗಿ ಭಾಗವಹಿಸಿ, ದೇಶವನ್ನು ಒಂದು ಪ್ರಮುಖ ಹಂತಕ್ಕೆ ತರುವಲ್ಲಿ ಅವರ ಪಾತ್ರ ದೊಡ್ಡದು. ದೇಶದಲ್ಲಿ ಅನೇಕ ಸಾಮಾಜಿಕ ಸುಧಾರಣೆಗಳನ್ನು ಜಾರಿಗೆ ತಂದರು.ಅವುಗಳು ಎಲ್ಲಾ



ಕಡೆಗೆ ಪ್ರಭಾವ ಬೀರಿದವು ಇದಕ್ಕೆ ಗಂಗಾವತಿಯು ಹೊರತಾಗಿಲ್ಲ.ಗಾಂಧೀಜೀಯವರ ವಿಧಾಯಕ ಕಾರ್ಯಕ್ರಮಗಳಾದ

- ಖಾದಿ ಆಂದೋಲನ :
- ಹರಿಜನೋದ್ಧಾರ : ಅವರ ಸಲುವಾಗಿ ಬಾವಿ ಮಡಿಕಳೆಯುವುದು, ದೇವಸ್ಥಾನಗಳಿಗೆ ಪ್ರವೇಶ ನೀಡುವುದು, ಸ್ವಚ್ಛತಾ ಬದುಕನ್ನು ಅವರಿಗೆ ತಂದು ಕೊಡುವುದು, ಅಸ್ಪೃಶ್ಯತೆಯನ್ನು ಹೋಗಲಾಡಿಸುವುದು,
- ಗುಡಿ ಕೈಗಾರಿಕೆಗಳನ್ನು ಬೆಳೆಸುವುದು, ಸ್ವದೇಶಿ ವಸ್ತುಗಳ ಬಳಕೆ, ಪರದೇಶಿ ವಸ್ತಗಳ ಬಹಿಷ್ಕಾರ ಹೀಗೆ ಹಲವಾರು ಸಮಾಜಿಕ ಸುಧಾರಣೆಗಳು ಜರುಗಿದವು.

ಗಂಗಾವತಿ ತಾಲೂಕಿನಲ್ಲಿ ಹಾಗೂ ಕನಕಗಿರಿ ಭಾಗದಲ್ಲಿ ಹರಿಜನರನ್ನು ಗೌರವದಿಂದ ಕಾಣುತಿದ್ದರು. ಹೋಟಲಿನಲ್ಲಿ ಪ್ರವೇಶಕ್ಕೆ ಅವಕಾಶ ಕಲ್ಪಿಸಿದರು. ನವಲಿಯಲ್ಲಿ ಬಾವಿಯ ಮಡಿ ಕಳೆಯುವಿಕೆ, ಭೋಗಾಪುರೇಶ್ವರನ ದೇವಸ್ಥಾನಕ್ಕೆ ಹರಿಜನರಿಗೆ ಪ್ರವೇಶ ದೊರಕಿಸಿದ್ದು ಇದೇ ಸಮಯವೆಂದು ನವಲಿಯ ನೀಲಕಂಠಗೌಡರು ಮಾಲಿ ಪಾಟೀಲರು ಹೇಳಿದ್ದಾರೆಂದು ಇತಿಹಾಸದಲ್ಲಿ ಉಲ್ಲೇಖಿತಗೊಂಡಿದೆ.

**ಉಪಲದಿನ್ನಿಯ ಮಡಿವಾಳಪ್ಪನ ಹೃದಯವಂತಿಕೆ:**

ಗಂಗಾವತಿಯ ಕ್ರಿಯಾಶೀಲ ಸ್ವತಂತ್ರ್ಯ ಹೋರಾಟಗಾರರಾದ ಜಯತೀರ್ಥ ರಾಜ ಪುರೋಹಿತರು ಸ್ವತಃ ಸಾಹಿತಿಗಳಾಗಿದ್ದರು. ಅವರು ಬದುಕಿದಂತೆ ಬರೆದವರು. ಬೇರೆ ಬೇರೆ ಸ್ಥಳಗಳಿಗೆ ತೆರಳಿ ದೇಶಪ್ರೇಮ, ಸತ್ಯಾಗ್ರಹ, ಬ್ರಿಟಿಷರ ವಿರುದ್ಧ ಜನಸಾಮಾನ್ಯರನ್ನು ಜಾಗೃತಿಗೊಳಿಸುತ್ತಿದ್ದರು. ಇಂತಹ ಸಮಯದಲ್ಲಿ ಕನಕಗಿರಿಯ ಬಳಿ ಗೌರಿಪುರದಲ್ಲಿ ಭಾಷಣ ಮುಗಿಸಿಕೊಂಡು, ಪೋಲಿಸರಿಂದ ಪಾರಾಗಿ ರಾತ್ರಿ ವಂಕಲಕುಂಟೆಗೆ ಬಂದಾಗ ಇಲ್ಲಿ ಉಳಿಯುವುದು ಕ್ಷೇಮವಲ್ಲವೆಂದು ಲಿಂಗಯ್ಯ, ಶಿವಬಸಯ್ಯ, ಕೃಷ್ಣರಾವ್ ಇವರು ಉಪಲದಿನ್ನಿಯ ರೈತ ಮಡಿವಾಳಪ್ಪನ ಮನೆಗೆ ಕಳುಹಿಸುತ್ತಾರೆ. ಗಂಗಾವತಿಯ ಜಯತೀರ್ಥರನ್ನು ಪೋಲಿಸರು ಶೋಧಿಸಲು ಬಂದಾಗ, ರೈತ ತನ್ನ ಹೆಂಡತಿಯ ಪಕ್ಕದಲಿ ಮಲಗಿಸಿ, ಅವರು

ನನ್ನ ಹೆಂಡತಿ ಮತ್ತು ಮಗನೆಂದು ಕಾಪಾಡುತ್ತಾರೆ. ಇದು ಸತ್ಯಾಗ್ರಹಿಗಳಿದ್ದ ಸಹನೂಭೂತಿ ಮತ್ತು ಹೃದಯವೈಶಾಲ್ಯತೆಯನ್ನು ತೋರಿಸುತ್ತದೆ .ಗಂಗಾವತಿಯ ರಾಮಭಟ್‌ರಿಗಾಗಿ ಆತನ ಶೋಧನೆ ನೆಡೆದಾಗ ಆತನ ಹೆಂಡತಿ ಪದ್ಮಾವತಿಬಾಯಿ ಕೊಪ್ಪಳ ಜೈಲು ಸೇರಿದರು. ಇಂತಹ ಹಲವಾರು ತ್ಯಾಗಮಯಿ ಸನ್ನಿವೇಶಗಳು ಎಲ್ಲಾ ಕಡೆ ನಡೆದಿರುವುದು ಸಾಮಾನ್ಯ. ಎಲ್ಲವನ್ನೂ ಇದು ದೇಶಪ್ರೇಮ, ದೇಶಸೇವೆ ಎಂದು ತಿಳಿದಿದ್ದರು.

**ಗಂಗಾವತಿಯಲ್ಲಿ ಗುಡಿಕೈಗಾರಿಕೆ:**

ಸ್ವಾತಂತ್ರ್ಯ ಹೋರಾಟದಲ್ಲಿ ಸ್ವದೇಶಿ ವಸ್ತುಗಳನ್ನು ಬಳಸಲು ಸ್ವಾತಂತ್ರ್ಯ ಹೋರಾಟಗಾರರು ಕರೆ ನೀಡಿದರು. ಗುಡಿಕೈಗಾರಿಕೆಗಳು ದೇಶಾದ್ಯಂತ ಪ್ರಾರಂಭವಾದವು. ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನಲ್ಲಿಯೂ ಕೂಡ ಚಳುವಳಿಯ ಅಂಗವಾಗಿ ಗುಡಿ ಕೈಗಾರಿಕೆಗಳನ್ನು ಸ್ಥಾಪಿಸಿ, ದೇಶಿಯ ವಸ್ತುಗಳನ್ನು ಉತ್ಪಾದಿಸಿ ಮಾರಾಟ ಮಾಡುತ್ತಾರೆ. ಗಂಗಾವತಿ ಗುಡಿಕೈಗಾರಿಕೆ ಕೇಂದ್ರವು ಕಿಶನ್‌ರಾವ್ ದೇಸಾಯಿಯವರ ನೇತೃತ್ವದಲ್ಲಿ ಕಾಗದ ತಯಾರಿಕೆ ಕೈಗಾರಿಕೆ ಪ್ರಾರಂಭದ ಬಗ್ಗೆ ತಿಳಿಯುತ್ತದೆ. ಗುರುರಾಜ ಕೋಟಿಯವರ ನೇತೃತ್ವದಲ್ಲಿ ಚಾಪೆ ತಯಾರಿಕೆ, ಅಲ್ಲದೆ ಶಿಲ್ಪಗಳ ಕೆತ್ತನೆ ಕಾರ್ಯ ನಡೆಸಲಾಯಿತು. ರಾಘವೇಂದ್ರಾಚಾರ್ಯ ಜೋಶಿ ಮೊದಲಾದವರು ಖಾದಿ ಬಟ್ಟೆಗಳ ತಯಾರಿಕೆಯಲ್ಲಿ ಪ್ರಮುಖ ಪಾತ್ರ ವಹಿಸಿದರು. ಗಂಗಾವತಿಯ ಕಾರ್ಯಕರ್ತರಾದ ಕೇಶವರಾವ್ ಶ್ರೀಖಂಡೆ, ಎರಡೋಣಿ ವೆಂಕಟಾಚಾರ್ಯ ಗಂಗಾವತಿಯ ಮನೆ ಮನೆಗೆ ಹೋಗಿ ಮಾರಾಟ ಮಾಡಿದ್ದನ್ನು ಹಿರಿಯರು ನೆನಪಿಸಿಕೊಳ್ಳುತ್ತಾರೆ. ವಾರ್ದದಲ್ಲಿ ಗಾಂಧಿಯವರ ಆಶ್ರಮದಲ್ಲಿ ಮರಕಲದಿನ್ನಿ ಕಿಶನ್‌ರಾವ್ ಎನ್ನುವವರು ತರಬೇತಿ ಹೊಂದಿದ್ದರು. ಇವರು ಉತ್ತಮ ಕಲಾವಿದರು. ಗಂಗಾವತಿ ಕಾಗದ ತಯಾರಿಕೆಗೆ ಪ್ರಮುಖ ಹೆಸರು ಹಾಗೂ ಚರ್ಮದ ವಸ್ತುಗಳು ಅಂದರೆ ಚಪ್ಪಲ್, ಬೂಟ್ ತಯಾರಿಕೆ, ಶಿಲ್ಪಗಳ ಕೆತ್ತನೆ ಕೆಲಸಗಳು ಎಲ್ಲವೂ ನಡೆದವು. ಇಂಡಸ್ಟ್ರೀಸ್ ಅಥವಾ ಗುಡಿ ಕೈಗಾರಿಕೆಗೆ ದೇಶದ ಪ್ರಮುಖ ಹಿರಿಯರು ಬೆನ್ನೆಲುಬಾಗಿ ನಿಂತಿದ್ದರು. ಗುಡಿ ಕೈಗಾರಿಕೆಗಳ ವೀಕ್ಷಣೆಗಾಗಿ ಜನಾರ್ದನರಾವ್ ದೇಸಾಯಿ ಕುಕನೂರಿನ ರಾಗಿ ದೇಸಾಯಿ,ಜಯತೀರ್ಥ



ರಾಜಪುರೋಹಿತ್ ಮೊದಲಾದವರು ಆಗಮಿಸಿದ್ದರು. ಇದು ಬರೀ ಕೈಗಾರಿಕೆಯಾಗಿರದೆ ರಾಷ್ಟ್ರಸೇವೆಯೂ ಆಗಿತ್ತು.

**ಅಧೀವೇಶನಗಳ ಪಾತ್ರ :**

ಸ್ವಾತಂತ್ರ್ಯ ಹೋರಾಟದಲ್ಲಿ ಸ್ವತಂತ್ರವನ್ನು ಪಡೆಯುವುದಕ್ಕಾಗಿ ಹಾಗೂ ಜನರನ್ನು ಜಾಗೃತಿಗೊಳಿಸುವ ನಿಟ್ಟಿನಲ್ಲಿ ದೇಶದ ತುಂಬಾ ಅನೇಕ ಕಾರ್ಯಕ್ರಮಗಳನ್ನು ಗೋಪಾಲಕೃಷ್ಣ ಗೋಖಲೆ, ಬಾಲಗಂಗಾಧರ್ ತಿಲಕ್, ಗೋವಿಂದ ರಾನಡೆ, ಗಾಂಧೀಜಿ ಮುಂತಾದವರು ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಜನರನ್ನು ಜಾಗೃತಿ ಮಾಡುತ್ತಿದ್ದರು. ಸ್ಥಾನಿಕ ಹಿರಿಯರನ್ನು ಭೇಟಿಯಾಗುವುದು. ಅವರಿಗೆ ಚಳುವಳಿಯ ಅಗತ್ಯವನ್ನು ತಿಳಿಸಿಕೊಡುವುದು ಅವರ ಪ್ರಮುಖ ಉದ್ದೇಶವಾಗಿತ್ತು. ಅನೇಕ ಅಧಿವೇಶನಗಳು ಕೂಡ ಜರುಗಿದವು.

**ಲಕ್ನೋ ಕಾಂಗ್ರೆಸ್ ಅಧಿವೇಶನ:**

೧೯೨೪ ರ ಬೆಳಗಾವಿ ಕಾಂಗ್ರೆಸ್ ಅಧಿವೇಶನ ಇದು ರಾಯಚೂರು ಮತ್ತು ಕೊಪ್ಪಳ ಭಾಗದವರಿಗೆ ಬಹಳ ಮಹತ್ವವನ್ನು. ಗಾಂಧೀಜಿಯವರನ್ನು ಕಣ್ತುಂಬಿಕೊಳ್ಳುವುದು ಹಾಗೂ ಕಾಂಗ್ರೆಸ್ಸಿನ ಉದ್ದೇಶಗಳನ್ನು ಸ್ವೀಕರಿಸುವುದು ಪ್ರಮುಖ ಕಾರ್ಯವಾಗಿತ್ತು. ಅಲ್ಲದೇ ಅಧೀವೇಶನದ ಆಶಯಗಳನ್ನು ಪಾಲಿಸುವುದು ಪ್ರಮುಖ ಕಾರ್ಯವಾಗಿತ್ತು.

**ಲಾಹೋರ್ ಅಧೀವೇಶನ :**

೧೯೨೯ ರಲ್ಲಿ ಜರುಗಿದ ಲಾಹೋರ್ ಕಾಂಗ್ರೆಸ್ ಅಧಿವೇಶನಕ್ಕೆ ಕೊಪ್ಪಳ ಭಾಗದವರು ಅದರಲ್ಲೂ ಗಂಗಾವತಿ ಭಾಗದವರು ಕೂಡ ಭಾಗವಹಿಸಿದ್ದರು. ಸಂಪೂರ್ಣ ಸ್ವರಾಜ್ಯಕ್ಕಾಗಿ ಜವಾಹರಲಾಲ್ ನೆಹರು ಅವರು ಮನವಿ ಮಾಡಿದರು. ಅದರ ಪ್ರಯುಕ್ತ ಸಂಪೂರ್ಣ ಸ್ವರಾಜ್ಯಕ್ಕಾಗಿ ದೇಶದಲ್ಲೆಡೆ ಕೂಗು ಕೇಳಿಬಂತು.

**ಭಾನಾಪೂರ ಘಟನೆ:**

ಯಲಬುರ್ಗಾ ತಾಲೂಕಿನ ಭಾನಾಪೂರ ರೈಲ್ವೇ ಸ್ಟೇಷನ್ನಿನ ಮೇಲೆ ಕಾಂಗ್ರೆಸ್ ಅಧ್ಯಕ್ಷರಾದ ಡಾಕ್ಟರ್ ರಾಜೇಂದ್ರ ಪ್ರಸಾದರು ಪ್ರವಾಸದಲ್ಲಿದ್ದರು. ಇಲ್ಲಿಯ ಬರಗಾಲದ ಬಗ್ಗೆ ವರದಿಯನ್ನು ಒಪ್ಪಿಸಿದರು. ಅವರ ಜೊತೆ

ಆಚಾರ್ಯ ಕೃಪಾಲಿನಿ, ಕರ್ನಾಟಕ ಪ್ರಾಂತ ಕಾಂಗ್ರೆಸ್ ಅಧ್ಯಕ್ಷರಾದ ಹೊಸಮನಿ ಸಿದ್ದಪ್ಪನವರು ಇದ್ದರು. ಆ ಸಮಯದಲ್ಲಿ ಕೌಜಲಗಿ ಹನುಮಂತರಾಯರು, ಶೌಕತ್‌ಅಲಿ, ತೇಜ್ ಬಹದ್ದೂರ್, ರಾಯಚೂರ್ ಮತ್ತು ಕೊಪ್ಪಳದಲ್ಲಿ ಭಾಷಣ ಮಾಡಿ ವಿದ್ಯಾರ್ಥಿಗಳಲ್ಲಿ, ಯುವಕರಲ್ಲಿ ಕಾಂಗ್ರೆಸ್ಸಿಗೆ ರಾಷ್ಟ್ರಪ್ರೇಮ ಇದರ ಜೊತೆ ಜೊತೆಗೆ ರಾಷ್ಟ್ರೀಯ ಜಾಗೃತಿಯನ್ನು ಉಂಟು ಮಾಡಿದರು. ಆ ಸಮಯದಲ್ಲಿ ಗಾಂಧೀಜಿಯವರು ರಾಷ್ಟ್ರೀಯ ಕಾರ್ಯಕ್ರಮಗಳನ್ನು ಪ್ರಾರಂಭಿಸುವಲ್ಲಿ ಪ್ರಮುಖ ಪಾತ್ರವಹಿಸಿದರು.

**ಮುಂಬೈ ಅಧಿವೇಶನ:**

೭, ೮, ೯ ನೇ ಆಗಸ್ಟ್ ೧೯೪೨ ರಲ್ಲಿ ನಡೆದ ಮುಂಬೈ ಕಾಂಗ್ರೆಸ್ ಅಧಿವೇಶನಕ್ಕೆ ಗಂಗಾವತಿಯ ರಾಮಭಟ್ಟ ಜೋಷಿ ಹಾಗೂ ಹಂಪಯ್ಯ ಎನ್ನುವವರು ಗಂಗಾವತಿಯನ್ನು ಪ್ರತಿನಿಧಿಸಿ, ಉಭಯರು ಮುಂಬೈಯಲ್ಲಿ ಸೇರಿದ ಸಮಾವೇಶಕ್ಕೆ ಹೋಗಿ 'ಮಾಡು ಇಲ್ಲವೇ ಮಡಿ' ಆದೇಶ ಪಡೆದುಕೊಂಡರು.

**ರಜಾಕಾರರ ಸಂಘಟನೆ:**

ಸ್ವತಂತ್ರ ಪಡೆಯುವುದಕ್ಕಿಂತ ಮುಂಚಿತವಾಗಿ ಹೈದರಾಬಾದಿನ ನಿಜಾಮನ ಹಾಗೂ ರಜಾಕಾರರ ಪೊಲೀಸರ ದಬ್ಬಾಳಿಕೆ ಹೆಚ್ಚಾಗಿತ್ತು. ರಜಾಕಾರರು ೧೯೨೬ ರಲ್ಲಿ 'ಇತ್ತೇಹಾದ್ ಉಲ್ ಮುಸಲ್ ಮೀನ್' ಎಂಬ ಸಂಘಟನೆಯನ್ನು ಹುಟ್ಟು ಹಾಕಿದರು. ನಿಜಾಮನ ಆಳ್ವಿಕೆಯನ್ನು ಸ್ಥಿರಗೊಳಿಸುವದಕ್ಕಾಗಿ, ಹೈದರಾಬಾದನ್ನು ಭಾರತ ಒಕ್ಕೂಟದಲ್ಲಿ ಸೇರುವುದನ್ನು ಬಲವಾಗಿ ವಿರೋಧಿಸಿದೆ. ಅವರ ಉಗ್ರ ಹಾಗೂ ಅಗ್ರ ನಾಯಕನಾದ ಕಾಶಿಮ್ ರಜಿವಿಯು ಸದಾ ಜನಸಾಮಾನ್ಯರ ಮೇಲೆ ದಬ್ಬಾಳಿಕೆ, ಮಾನಹಾನಿ, ಕೊಲೆ, ಸುಲಿಗೆ ಮಾಡುತ್ತಿದ್ದನು. ಅವನ ಘೋಷಣೆಯೊಂದೇ "ಘಜನಿ, ಬಾಬರನ ಮೊಮ್ಮಕ್ಕಳಾದ ನಾವು ದಿಲ್ಲಿ ಕೆಂಪುಕೋಟೆ ಮೇಲೆ ನಮ್ಮ ಅಸಫ್ ಜಾಹಿ ಧ್ವಜವನ್ನು ಹಾರಿಸುತ್ತೇವೆ. ನಮ್ಮ ಮೇರು ದೊರೆ ನಿಜಾಮನ ಪಾದಗಳನ್ನು ಬಂಗಾರದ ನೀರಿನಿಂದ ತೊಳೆಯುವ ಸಮಯ ಬರುತ್ತದೆ" ಎಂದು ಹೇಳುತ್ತಲೇ ಇರುತ್ತಾನೆ. ೧೯೪೦ ರಲ್ಲಿ ಕಾಶಿಂ



ರಜ್ವಿ ರಜಾಕಾರ ಉಗ್ರ ಸಂಘಟನೆಯ ಮೂಲಕ ಭಾರತದ ವಿಮೋಚನಾ ಚಳುವಳಿಯನ್ನು ಹತ್ತಿಕ್ಕಲು ಮನೆಗಳಿಗೆ ಬೆಂಕಿ ಹಚ್ಚುತ್ತಾನೆ. ಮಹಿಳೆಯರ ಮಾನಭಂಗ, ಮಕ್ಕಳ ಹತ್ಯೆ, ಚಳುವಳಿಗಾರರಿಗೆ ಚಿತ್ರಹಿಂಸೆ ಮಾಡಲು ರಜಾಕಾರರಿಗೆ ಕರೆ ಕೊಡುತ್ತಾನೆ. ಹೀಗೆ ಹೋರಾಟಗಾರರ ಬದುಕನ್ನು ಅಸ್ಥಿರಗೊಳಿಸಲು ಅವರ ಹೋರಾಟವನ್ನು ಪ್ರತಿರೋಧಿಸುವ ಕೆಟ್ಟ ಕೆಲಸವನ್ನು ಮಾಡುತ್ತಾನೆ.

**ಶಿಬಿರಗಳು:**

ಅಂದಿನ ರಜಾಕಾರರ ದಬ್ಬಾಳಿಕೆಯನ್ನು, ದೌರ್ಜನ್ಯವನ್ನು ತಡೆಗಟ್ಟಲು ಹೈದರಾಬಾದ್ ಕಾಂಗ್ರೆಸ್ ಧುರೀಣರು ಬೇರೆ ಬೇರೆ ಸ್ಥಳಗಳಲ್ಲಿ ಶಿಬಿರಗಳನ್ನು ತೆರೆದಿದ್ದರು. ಗಂಗಾವತಿ ತಾಲೂಕಿನ ಒಂದು ಪ್ರಮುಖ ಶಿಬಿರ. ಶಿಬಿರವೆಂದರೆ ರಜಾಕಾರರ ದಬ್ಬಾಳಿಕೆಯ ವಿರುದ್ಧ ಹೋರಾಡಲು ಜನರನ್ನು ಜಾಗೃತಿಗೊಳಿಸುವುದು. ರಾಷ್ಟ್ರಪ್ರೇಮವನ್ನು ಬಿತ್ತರಿಸುವುದು. ರಜಾಕಾರರ ಕೊಲೆ, ಸುಲಿಗೆ, ಅತ್ಯಾಚಾರ ಮುಂತಾದವುಗಳನ್ನು ತಡೆಯುವುದಾಗಿದೆ. ಪೊಲೀಸರ ಹಾಗೂ ರಜಾಕಾರರಿಂದ ಜನರನ್ನು ಸಂರಕ್ಷಿಸುವ ಮುಖ್ಯ ಕೆಲಸ ಶಿಬಿರದ್ದಾಗಿದೆ. ಸೊಲ್ಲಾಪುರ, ತಾಳಿಕೋಟಿ, ಗುಡ್ಡದಮಲ್ಲಾಪುರ, ಶಾಂತಗಿರಿ ಇಟಗಿ, ಗಜೇಂದ್ರಗಡ, ತಿಮ್ಮಾಪುರ, ಹಳ್ಳಿಕೇರಿ, ಮುಂಡರಗಿ, ಬರದೂರ,ಬಾಚಿಗೊಂಡನಹಳ್ಳಿ, ಕಂಪ್ಲಿ ಈ ಸ್ಥಳಗಳಲ್ಲಿ ಶಿಬಿರಗಳನ್ನು ಸ್ಥಾಪಿಸಿದರು. ಪ್ರತಿಯೊಂದು ಶಿಬಿರದಲ್ಲಿಯು ಶಿಬಿರಾಧಿಪತಿ, ನಾಯಕ, ಕೋಶಾಧಿಕಾರಿ ಇರುತ್ತಿದ್ದರು. ಸುಭಾಷ್ ಚಂದ್ರ ಬೋಸ್ ಅವರ ಗರಡಿಯಲ್ಲಿ ಪಳಗಿದ ನಾಯಕರು ರಾಮಚಂದ್ರ ಮತ್ತು ಜಗತ್‌ಸಿಂಗ್ ಶಿಬಿರದ ಯೋಧರಿಗೆ ಸೈನಿಕ ತರಬೇತಿಯನ್ನು ನೀಡುತ್ತಿದ್ದರು. ಭಾರತ ಸರ್ಕಾರ ಈ ಶಿಬಿರಗಳಿಗೆ ಗೃಹರಕ್ಷಕದಳದ ನೆರವನ್ನು ನೀಡಿ ಶಿಬಿರಕ್ಕೆ ಸಹಕಾರವನ್ನು ನೀಡಿದ್ದರು.ಇಂದಿನ ಕಂಪ್ಲಿ ಅಂದು ಗಂಗಾವತಿ ತಾಲೂಕಿಗೆ ಸೇರಿತ್ತು.

**ರಮಾನಂದ ತೀರ್ಥರ ಪ್ರವಾಸ:**

ರಮಾನಂದ ತೀರ್ಥರು ಸನ್ಯಾಸಿಯಾಗಿದ್ದರು. ಸ್ವತಂತ್ರ ಹೋರಾಟಗಾರರ ಬಗ್ಗೆ ಅಪಾರ ಗೌರವ ಮತ್ತು ಧನ್ಯತಾಭಾವ ಅವರದು. ಸ್ವತಃ ದೇಶದ ಸ್ವಾತಂತ್ರ್ಯಕ್ಕಾಗಿ

ತಮ್ಮ ಇಡೀ ಜೀವನವನ್ನೇ ಮುಡಿಪಾಗಿಟ್ಟರು. ಆಗಿನ ಕಾಂಗ್ರೆಸ್ ಧುರೀಣರೊಂದಿಗೆ ಗಾಂಧೀಜಿಯ ಅನುಯಾಯಿಗಳಾಗಿದ್ದರು. ಇವರು ವಿಶೇಷವಾಗಿ ಹೈದರಾಬಾದ್ ಪ್ರಾಂತ ವಿಮೋಚನೆಗಾಗಿ ಹೋರಾಟ ನಡೆಸಿದರು. ಜನರನ್ನು ಸಂಘಟಿಸುತ್ತ ಕೊಪ್ಪಳ ಹಾಗೂ ರಾಯಚೂರು ಭಾಗಗಳಲ್ಲಿ ಸ್ವಾತಂತ್ರ್ಯ ಚಳಿವಳಿಯ ಕೆಲಸವನ್ನು ಮಾಡಿದರು. ನಿಜಾಮನಿಗೆ ಇವರು ಸಿಂಹಸ್ವಪ್ನವಾಗಿದ್ದರು. ಗಂಗಾವತಿಗೆ ಜನಜಾಗೃತಿಗಾಗಿ ಹೋದ ದಾಖಲೆಗಳು ಸಿಗುತ್ತವೆ.

### ಹರ್ಡೇಕರ್ ಮಂಜಪ್ಪನವರ ಪ್ರವಾಸ: (೧೯೩೫–೧೯೪೮)

ಹರ್ಡೇಕರ ಮಂಜಪ್ಪನವರು ಕರ್ನಾಟಕದ ಗಾಂಧಿ ಎಂದೇ ಪ್ರಸಿದ್ಧರು. ಇವರು ಸ್ವಾತಂತ್ರ್ಯ ಹೋರಾಟದ ಜೊತೆ ಜೊತೆಗೆ ಆರ್ಯ ಸಮಾಜದ ಸಕ್ರಿಯ ಕಾರ್ಯಕರ್ತರಾಗಿ ಸೇವೆಯನ್ನು ಮಾಡುತ್ತಿದ್ದರು. ಹಿಂದೂ–ಮುಸ್ಲಿಂ ಭೇದಭಾವ ಮಾಡದೆ ಎಲ್ಲರನ್ನೂ ಒಂದೇ ಎಂದು ಭಾವಿಸಿದ್ದರು. ಆದರೆ ಮುಸ್ಲಿಂ ಪಕ್ಷದ ನಾಯಕ ಕಾಶಿಮ್ ರಜಿವಿ ಹಾಗೂ ನಿಜಾಮನ ಬಗ್ಗೆ ತಿರಸ್ಕಾರವಿತ್ತು. ರಾಷ್ಟ್ರದ ಏಕತೆ, ಸಮಗ್ರತೆ, ಸರ್ವೋತೋಮುಖ ಅಭಿವೃದ್ಧಿಗಾಗಿ ಇವರು ಕೂಡ ಗಂಗಾವತಿ ಭಾಗಕ್ಕೆ ಬಂದಿರುವುದು ಉಲ್ಲೇಖವಿದೆ.

### ನಿಜಾಮ ಕರ್ನಾಟಕ ಪರಿಷತ್ ಸ್ಥಾಪನೆ:

೧೯೪೬ ಆಗಸ್ಟ ೧೬, ೧೭, ೧೮ ದಿನಾಂಕದಂದು ಮೂರು ದಿನಗಳ ಕಾಲ ಗಂಗಾವತಿಯ ಖಾಜನಗೌಡರ ಕಾಂಪೌಂಡಿನಲ್ಲಿ ಅಧಿವೇಷನ ಜರುಗಿತು. ರಾಮಭಟ್ಟರು, ರಾಮಾಚಾರಿ, ಅಕ್ಬರ್, ತಿರುಮಲ ಕೇಶವರಾವ್, ಶ್ರೀಕಂಠ, ಆರ್.ಎಂ. ಗಂಗಾವತಿ, ಕಿಶನ್‌ರಾವ್ ಮರಕಂದಿನ್ನಿ ಮೊದಲಾದವರು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಹೈದರಾಬಾದಿನಲ್ಲಿ ಪ್ರಥಮ ಕಾಂಗ್ರೆಸ್ ಅಧಿವೇಶನ ರಮಾನಂದತೀರ್ಥರ ಅಧ್ಯಕ್ಷತೆಯಲ್ಲಿ ಜರುಗಿತು. ಈ ಅಧಿವೇಶನದಲ್ಲಿ ಮರಾಠವಾಡ, ನಿಜಾಮ ತೆಲುಗು ಮುಂತಾದ ಪರಿಷತ್ತುಗಳನ್ನು ವಿಸರ್ಜನೆ ಗೊಳಿಸಲಾಯಿತು. ನಂತರ ಇವುಗಳನ್ನೆಲ್ಲವನ್ನೂ ವಿಲೀನಗೊಳಿಸಿ ನಿಜಾಮ ಕರ್ನಾಟಕ ಪರಿಷತ್ತು ಸ್ಥಾಪನೆಯಾಯಿತು. ನಿಜಾಮ ಕರ್ನಾಟಕ ಪರಿಷತ್ತಿನ ಮುಖಾಂತರ ಅನೇಕ ಕಡೆ ಕರ್ನಾಟಕ ಸಂಘಗಳು ಗಜಾನನೋತ್ಸವ,



ವಾಚನಾಲಯಗಳು, ಬೋರ್ಡಿಂಗ್ ಸ್ಥಾಪನೆ, ಸಾಹಿತ್ಯ–ವಿಚಾರ ರಾಷ್ಟ್ರೀಯ ಸಂಕೀರಣ, ವಿಚಾರ ಸಂಕೀರಣಗಳು, ರಾಷ್ಟ್ರಭಕ್ತಿಯನ್ನು ಸೂಚಿಸುವ ಉಪನ್ಯಾಸಗಳು ತಮ್ಮ ತಮ್ಮ ಊರುಗಳಲ್ಲಿ, ಜಿಲ್ಲೆಗಳಲ್ಲಿ, ತಾಲೂಕ ಮಟ್ಟದಲ್ಲಿ ಜನರ ಉತ್ಸವಗಳಾಗಿ ಮಾರ್ಪಡಿಸಲಾಯಿತು. ಮುಂದೆ ಬ್ರಿಟಿಷರ ವಿರುದ್ಧ ಜನರನ್ನು ಜಾಗೃತಗೊಳಿಸಿ ಸ್ವಾತಂತ್ರ್ಯದ ಕಹಳೆಯನ್ನು ಮೊಳಗಿಸಲಾಯಿತು.

### ಲೇವಿ ವಿರುದ್ಧದ ಆಂದೋಲನ:

ಬ್ರಿಟಿಷರು ಭಾರತೀಯರ ಮೇಲೆ ಸಾಧುವಲ್ಲದ ಅನೇಕ ಕಾನೂನುಗಳನ್ನು ತಂದಿದ್ದರು.ಸಾಕಷ್ಟು ಬರಗಾಲವಿದ್ದರೂ ಬೆಲೆಗಳ ಮೇಲೆ ಲೇವಿ ಹಾಕುವುದು ಸಾಮಾನ್ಯವಾಗಿತ್ತು.೧೯೪೪ ರಿಂದ ೧೯೪೭ ರವರೆಗೆ ಲೇವಿ ವಿರುದ್ಧ ಹೋರಾಟ ಸ್ವಾತಂತ್ರ್ಯ ಹೋರಾಟಕ್ಕೆ ಬುನಾದಿ ಹಾಕಿತು.ಗಂಗಾವತಿ ಭಾಗದಲ್ಲಿ ಎಲ್ಲಾ ಕಡೆ ರೈತ ಹೋರಾಟಗಳು ಪ್ರಾರಂಭವಾದವು. ಗಂಗಾವತಿಯ ಕಾಂಗ್ರೇಸ್ಸಿನ ಹಿರಿಯ ಮುಖಂಡರಾದ ಕೇಶವರಾವ್ ಶ್ರೀಖಂಡೆ,ಯರಡೋಣಿ ವೆಂಕೋಬಾಚಾರ್ಯ, ಆರ್ ಆಮ್ ಗಂಗಾವತಿ, ವಡೆಯರ ಕನಕಪಾಚಾರ್ಯ, ಭೀಮಸೇನರಾವ್ ಬೆಣಕಲ್, ಬಸಪ್ಪ ಆನೆಗುಂದಿ, ಈರಣ್ಣ ಆನೆಗೊಂದಿ, ಕೃಷ್ಣ ಆನೆಗೊಂದಿ, ರುದ್ರಗೌಡ ನಂದಿಹಳ್ಳಿ, ಮಾಧವಾಚಾರ್ಯ, ಜಾಗಿರ್ದಾರ್ ಮುಸ್ಟೂರು, ಶ್ರೀನಿವಾಸರಾವ್, ಅಂಗಡಿ ಬಸಪ್ಪ ಮೊದಲಾದವರು ಸತ್ಯಾಗ್ರಹ ಮಾಡಿದರು. ಅವರನ್ನು ದಸ್ತಗಿರಿ ಮಾಡಿ, ಶಿಕ್ಷೆಗೆ ಒಳಪಡಿಸಿದರು. ಇದನ್ನು ನೋಡಿದ ವಿದ್ಯಾರ್ಥಿಗಳು ಸತ್ಯಾಗ್ರಹವನ್ನು ಪ್ರಾರಂಭಿಸಿದರು. ಎಣ್ಣೆ ಯಂಕಣ್ಣ, ರುದ್ರಗೌಡ ಕಾರಟಗಿ, ಭೀಮಸೇನರಾವ್, ಗೋಗಿ ವೆಂಕೋಬ್, ಆಚಾರಿ ನಾಗರಹಳ್ಳಿ, ಹೇರೂರು ರಾಮರಾವ್, ನರಸಿಂಹಾಚಾರ್ ನವಲಿ, ನವಲಿ ಗುರುರಾಜ್ ತಂದೆ ಶ್ರೀನಿವಾಸರಾವ್, ಅಕ್ಬರ್ ಭೋಗೇಶ್ ರಾವ್, ಪ್ರಹ್ಲಾದರಾವ್, ಕಲ್ಯಾಣ ರಾವ್, ಕುಲಕರ್ಣಿ ಕಿಸನ್ ರಾವ್, ಸುಗಂಧಿ, ಪಂಪಣ್ಣ, ವೆಂಕನಗೌಡ ತಾವರಗೇರಿ, ಅನಂತಕೃಷ್ಣ ಆನೆಗೊಂದಿ ಮೊದಲಾದವರು ಸತ್ಯಾಗ್ರಹ ಮಾಡಿ ಶಿಕ್ಷೆಗೆ ಒಳಗಾದರು. ಇನ್ನುಳಿದ ಕಾರ್ಯಕರ್ತರು ಎಂದರೆ ಬಿ. ಮರಿಯಪ್ಪ, ಜಿ. ಮಹಾದೇವಪ್ಪ, ಕೊಪ್ರೇಶಾಚಾರ್ ರಾಜಪುರೋಹಿತ, ರಾಜಪ್ಪ ಅರಳಿ, ಕೋದಂಡರಾಮಪ್ಪ, ರಾಮಾಚಾರಿ ಅಯೋಧ್ಯ, ರಾಘವೇಂದ್ರಾಚಾರ್

ಹನುಮಂತಪ್ಪ, ಬಿ ಜಗದೀಶಪ್ಪ, ಗುಂಡೂರು ತಿರುಮಲರಾವ್, ಜಾಗಿರ್ದಾರ್ ಆನೆಗೊಂದಿ, ಶಿವಯ್ಯ ಶೆಟ್ಟಿ, ಹಂಪಯ್ಯ ಕನಕಗಿರಿ ಇನ್ನೂ ಅನೇಕರು ಶ್ರೀರಾಮ ಭಟ್ಟ ಜೋಶಿ ಇವರ ಮುಖಂಡತ್ವದಲ್ಲಿ ಭೂಗತ ಚಳುವಳಿಯನ್ನು ಪ್ರಾರಂಭಿಸಿದರು. ಬ್ರಿಟಿಷ್ ಸರ್ಕಾರದ ವಿರುದ್ಧ ಅಸಹಕಾರ ಪ್ರಾರಂಭಿಸಿದರು. ಮಾಲಗುಜಾರಿ ಕೊಡಬಾರದೆಂದು, ಲೇವಿ ಕೊಡಬಾರದೆಂದು, ಹಾಗೂ ಇನ್ನಿತರ ತೆರಿಗೆಗಳನ್ನು ಕಟ್ಟಬಾರದು ಅಲ್ಲದೆ ಶೇಂದಿ ಗಿಡಗಳನ್ನು ನಾಶ ಮಾಡಬೇಕೆಂದು ಜನರನ್ನು ಪ್ರಚೋದಿಸಿದರು. ಹೀಗಾಗಿ ಲೇವಿ ಚಳುವಳಿಯು ಚುರುಕುಗೊಂಡಿತು.

ಆಸ್ತಿಪಾಸ್ತಿಗಳಿಗೆ ಹೆಚ್ಚು ಹಾನಿಗೊಳಗಾದ ಅಯೋಧ್ಯ ರಾಘವೇಂದ್ರಾಚಾರ್ಯರು ಅವರು ಬೆಳೆದ ಭೂಮಿಯಲ್ಲಿ ಕಬ್ಬು, ನೆಲ್ಲು ಬೆಳೆಗಳನ್ನು ರಜಾಕಾರರು ಲೂಟಿ ಮಾಡಿದರು. ರಜಾಕಾರರು ಅವರನ್ನು ಶೋಧಿಸತೊಡಗಿದರು. ಇದರಿಂದ ರಾಮಭಟ್ಟ ಜೋಶಿಯವರು ಭೂಗತರಾಗಿ ಕಾಲುನಡಿಗೆಯಿಂದ ಹುಲಿಗಿ ಮಾರ್ಗವಾಗಿ ಕಂಪ್ಲಿಗೆ ಬಂದು ಶಿಬಿರದ ಮುಖಂಡತ್ವವನ್ನು ವಹಿಸಿದರು.

**ಕನಕಗಿರಿಯಲ್ಲಿ ವಾಚನಾಲಯ ಸ್ಥಾಪನೆ:**

ಜಯತೀರ್ಥ ರಾಜಪುರೋಹಿತರು ಗಂಗಾವತಿ ಹೋರಾಟಗಾರರಲ್ಲಿಯೇ ಅಚ್ಚಳಿಯದ ಹೆಸರು. ಕನಕಗಿರಿಯಲ್ಲಿ ವಾಚನಾಲಯವನ್ನು ಸ್ಥಾಪಿಸಬೇಕೆಂದು ಕನಸು ಕಂಡಿದ್ದರು ಅದಕ್ಕಾಗಿ ಕನಕಗಿರಿಯಲ್ಲಿ ಹಿರಿಯರನ್ನು ಹಾಗೂ ಸ್ಥಳೀಯ ಶಾಲೆಯ ಮುಖ್ಯೋಪಾಧ್ಯಾಯರಿಗೆ ವಾಚನಾಲಯ ಉದ್ಘಾಟನೆಗೆ ಕರೆಯಲು, ಅವರು ಬರಲು ಒಪ್ಪಲಿಲ್ಲ. ನಂತರ ಜಯತೀರ್ಥ ರಾಜಪುರೋಹಿತರ ಪ್ರಯತ್ನ ನಿಲ್ಲಲಿಲ್ಲ. ಮುಂದೆ ಹೇಗೆ ಮಾಡಬೇಕೆಂದು ಚಿಂತೆ ಮಾಡಿದಾಗ ನಿಜಾಮ ಕರ್ನಾಟಕ ಪರಿಷತ್ತಿನ ಮುಖಂಡರಾದ ಜನಾರ್ದನ್ ದೇಸಾಯಿಯವರು ಗಂಗಾವತಿಗೆ ಬಂದಿದ್ದ ವರದಿ ತಿಳಿಯಿತು. ನಂತರ ಕನಕಗಿರಿಯಲ್ಲಿ ವಾಚನಾಲಯವನ್ನು ಸ್ಥಾಪಿಸಲು ಜನಾರ್ದನ್ ದೇಸಾಯಿಯವರು ಷರತ್ತಿನ ಮೇಲೆ ಒಪ್ಪಿಕೊಂಡರು. ಕನಕಗಿರಿಯಲ್ಲಿ ನಿಜಾಮ ಕರ್ನಾಟಕ ಪರಿಷತ್ತಿನ ಶಾಖೆಯನ್ನು ಉದ್ಘಾಟಿಸುವರು. ನಂತರ ಮನೆಯಲ್ಲಿ ಸೇರಿ ವಾಚನಾಲಯದ ಉದ್ಘಾಟನೆಯಾಯಿತು. ಕರ್ನಾಟಕ ಪರಿಷತ್ತಿನ ಕನಕಗಿರಿ ಶಾಖೆ ಪ್ರಾರಂಭವಾಯಿತು. ಜಯತೀರ್ಥ ರಾಜಪುರೋಹಿತರು ಕಾರ್ಯದರ್ಶಿಗಳಾದರು. ಅಧ್ಯಕ್ಷರು ಯಾರಾಗಬೇಕೆಂದು ಹೇಳಿದಾಗ ಯಾರೂ ಮುಂದೆ ಬರಲಿಲ್ಲ. ಕಾರ್ಯದರ್ಶಿಗಳ ಮೂಲಕ ಎಲ್ಲಾ ಚಟುವಟಿಕೆಗಳನ್ನು ಮುಂದುವರಿಸಿದರು. ಪೊಲೀಸರು ಬಂದು ಈ ಎಲ್ಲಾ ಚಟುವಟಿಕೆಗಳನ್ನು ಮಾಡದಂತೆ ಬರೆದುಕೊಂಡು ಹೋದರು. ಮುಂದೆ ಪೊಲೀಸರಿಂದ ಸಾಕಷ್ಟು ತೊಂದರೆಗಳು ಉಂಟಾದವು. ಜಯತೀರ್ಥ ರಾಜಪುರೋಹಿತರಾಗಲಿ,ಸ್ವಾತಂತ್ರ್ಯ ಕಾರ್ಯಕರ್ತರಾಗಲಿ ಇದಾವುದಕ್ಕೂ ಹೆದರಲಿಲ್ಲ.



**ಕೃಷ್ಣಬಾಯಿಯ ತ್ಯಾಗ:**

ರಾಮಭಟ್ ಜೋಶಿಯವರು ಗಂಗಾವತಿ ಭಾಗದಲ್ಲಿ ಅತ್ಯಂತ ಕ್ರಿಯಾಶೀಲ ಸ್ವಾತಂತ್ರ್ಯ ಹೋರಾಟಗಾರರು. ಚಳುವಳಿಯ ಪ್ರೇರಕರಾಗಿ ಸಂಘಟನೆಗೆ ಸಿದ್ಧರಾಗಿದ್ದರು. ಇವರು ಯಾವಾಗಲೂ ಸ್ವಾತಂತ್ರ್ಯ ಹೋರಾಟಗಾರರನ್ನು ನಂಬಿಸುತ್ತ, ದೇಶಪ್ರೇಮವನ್ನು ಮೆರೆಯುತ್ತಾ, ಬ್ರಿಟಿಷರ ಕೆಂಗಣ್ಣಿಗೆ ಗುರಿಯಾಗಿದ್ದರು. ಅಷ್ಟೇ ಅಲ್ಲದೆ ಆವತ್ತಿನ ಅಧಿಕಾರಶಾಹಿ ರಜಾಕಾರರ, ನಿಜಾಮರ ಕೆಂಗಣ್ಣಿಗೆ ಗುರಿಯಾಗಿದ್ದರು. ಸರ್ಕಾರವು ಇವರ ಹಿಂದೆ ಗೂಢಚಾರರನ್ನು ಬಿಟ್ಟಿದ್ದರು. ರಾಮಭಟ್ ಜೋಶಿಯವರು ಇಷ್ಟೆಲ್ಲಾ ಕ್ರಿಯಾಶೀಲವಾಗಿರಲು ಅವರ ಧರ್ಮಪತ್ನಿ ಕೃಷ್ಣ ಬಾಯಿಯ ಪ್ರೋತ್ಸಾಹವೆಂದು ತಿಳಿಯುತ್ತಾರೆ. ಅವರ ಮನೆಯನ್ನು ಲೂಟಿ ಮಾಡುತ್ತಾರೆ. ನಂತರ ಅವರ ಮಡದಿಯಾದ ಕೃಷ್ಣಾಬಾಯಿಯನ್ನು ಕೊಪ್ಪಳದ ಜೈಲಿಗೆ ಹಾಕುತ್ತಾರೆ. ಎರಡೂವರೆ ವರ್ಷಗಳ ಕಾಲ ಜೈಲು ಶಿಕ್ಷೆ ವಿಧಿಸುತ್ತಾರೆ. ಕೃಷ್ಣಬಾಯಿಯವರು ಗಾಂಧೀಜಿಯ ವಿಧಾಯಕ ಕಾರ್ಯಕ್ರಮಗಳಿಗೆ ಮಹಿಳೆಯರನ್ನು ಸಂಘಟಿಸುತ್ತ, ಸಮಾಜಿಕ ಕಾರ್ಯಗಳಲ್ಲಿ ಸದಾ ತೊಡಗುತ್ತಿದ್ದರು. ಕಾಯ್ದೆಗಳನ್ನು ಉಲ್ಲಂಘನೆ ಮಾಡಿ ದೇಶದ್ರೋಹ ಮಾಡಿದ್ದಾರೆ ಎಂದು ದೇಶದ್ರೋಹದ ಪಟ್ಟಕಟ್ಟಿ ಶಿಕ್ಷೆಗೆ ಗುರಿ ಮಾಡಿದ್ದು ವಿಷಾದನೀಯ ಎಂದೇ ಹೇಳಬಹುದು. ಹೀಗೆ ಭಾರತದ ಸ್ವತಂತ್ರ ಹೋರಾಟದಲ್ಲಿ ಮಹಿಳೆಯರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಕೃಷ್ಣಬಾಯಿ ಇವತ್ತಿನ ಮಹಿಳೆಯರಿಗೂ ಮಾದರಿಯಾಗಿದ್ದಾರೆ.

## ಆನೆಗೊಂದಿ ಹಾಗೂ ಅಯೋಧ್ಯ ಟೋಲ್ ನಾಕ್ ಲೂಟಿ:

ರೈತರ ಮೇಲೆ ಹೇರುತ್ತಿದ್ದ ತೆರಿಗೆ, ಮಹಿಳೆಯರ ಮೇಲೆ ಅತ್ಯಾಚಾರ ಮುಂತಾದ ಕೆಟ್ಟ ಕೆಲಸಗಳನ್ನು ರಜಾಕಾರರು ನಿತ್ಯ ಮಾಡುವುದು ವಾಡಿಕೆಯಾಗಿತ್ತು. ಇದರಿಂದ ಸಿಟ್ಟಿಗೆದ್ದ ವಿದ್ಯಾರ್ಥಿ ಹೋರಾಟಗಾರರನ್ನು ಕೆರಳಿಸಿತು. ಇವರು ಸುಮ್ಮನಿರದೆ ಆನೆಗೊಂದಿ ಹಾಗೂ ಅಯೋಧ್ಯ ಟೋಲ್ ನಾಕ್‌ಗಳಲ್ಲಿ ಸಂಗ್ರಹವಾಗಿದ್ದ ಸಾಕಷ್ಟು ಹಣವನ್ನು ಅಲ್ಲಿಯ ಕರವಸೂಲಿಗಾರರು ಹಿಡಿದು, ಅವರನ್ನು ಹಿಂಸಿಸಿ, ಹಣವನ್ನು ಲೂಟಿ ಮಾಡಿದರು. ಇದರ ನೇತೃತ್ವವನ್ನು ರಾಮಭಟ್ ಜೋಯಿಸರು ವಹಿಸಿದ್ದರು. ವಿದ್ಯಾರ್ಥಿಗಳು ಕಚೇರಿಗೆ ಬೆಂಕಿ ಹಚ್ಚಿ ತುಂಗಭದ್ರ ನದಿಯನ್ನು ದಾಟಿ ಕಂಪ್ಲಿ ಶಿಬಿರವನ್ನು ಸೇರಿದರು. ಹೀಗೆ ಸ್ವತಂತ್ರ ಹೋರಾಟದಲ್ಲಿ ವಿದ್ಯಾರ್ಥಿಗಳು ಕೂಡ ಭಾಗವಹಿಸಿ ಸ್ವತಂತ್ರ ಹೋರಾಟಕ್ಕೆ ಕೈಜೋಡಿಸಿದರು.

## ನವಲಿ ಪ್ರಕರಣ :

ಲೇವಾದೇವಿ ಹಾಗೂ ತೆರಿಗೆಗಳನ್ನು ಕಟ್ಟಲಾಗುವುದಿಲ್ಲ ತುಂಬಾ ಬರಗಾಲವಿದೆ ಎಂದು ಗಂಗಾವತಿ ತಾಲೂಕಿನ ರೈತರು ಹೋರಾಟಕ್ಕಿಳಿದರು. ಕನಕಗಿರಿ ಸಮೀಪದ ನವಲಿ ಗ್ರಾಮದಲ್ಲಿ ವಿರುಪಾಕ್ಷಗೌಡ ಹಾಗೂ ಚಳ್ಳೂರು ರಾಘವೇಂದ್ರರಾವ್ ಪಂಚಾಕ್ಷರಯ್ಯ ನವರು ವಕೀಲರು ಇವರ ಮುಂದಾಳತ್ವದಲ್ಲಿ ಚಳುವಳಿಯನ್ನು ಪ್ರಾರಂಭಿಸಿದರು. ಇವರ ಮೇಲೆ ಕೇಸ್ ಹಾಕಲಾಯಿತು. ಉಳಿದವರು ಭೂಗತರಾದರು. ವಾರಂಟ್ ಜಾರಿ ಆಯಿತು. ರೈತರು ಮೆರವಣಿಗೆ ತೆಗೆದರು. ಮೆರವಣಿಗೆಯು ಅತ್ಯಂತ ತುರುಸಿನಿಂದ ನಡೆಯುತ್ತಿತ್ತು. ಈ ಸಮಯದಲ್ಲಿ ಅವರನ್ನು ಚದುರಿಸಲು ಅಧಿಕಾರಿಗಳು ಗೋಲಿಬಾರ್ ಮಾಡಿದರು. ಗೋಲಿಬಾರಿನಲ್ಲಿ ರೈತ ಮುಖಂಡರಾದ ಮಾಕಣ್ಣ ಕಂಬಳಿಗೆ ಗುಂಡು ತಗಲಿ ರಕ್ತದ ಮಡುವಿನಲ್ಲಿಯೇ ಮೃತಪಟ್ಟರು. ಇಂದಿಗೂ ನವಲಿ ಗ್ರಾಮದಲ್ಲಿ ಮೃತಪಟ್ಟ ಸ್ಥಳದಲ್ಲಿ ವೀರಕಟ್ಟೆಯಿದೆ. ಹಾಗೆಯೇ ಇನ್ನೊಬ್ಬ ರೈತ ಹೋರಾಟಗಾರರಾದ ಝೀಮ್ರಾ ನಾಯಕ್ ಎಂಬ ಲಮಾಣಿ ನಾಯಕನಿಗೂ ಗುಂಡು ಬಿತ್ತು ಅವರನ್ನು ಗಂಗಾವತಿ ಆಸ್ಪತ್ರೆಗೆ ಒಯ್ಯುವಾಗ ನಡುದಾರಿಯಲ್ಲಿ ಮರಣಹೊಂದಿದರು. ಇಂತಹ ರಕ್ತಸಿಕ್ತ ತ್ಯಾಗದಿಂದಲೇ ಹೋರಾಟಕ್ಕೆ ಮತ್ತಷ್ಟು ಹುರುಪು ಬಂದಿತು.



## ಮಂತ್ರಾಲಯ ಶಿಬಿರದ ನಂಟು :

ಸ್ವತಂತ್ರ ಹೋರಾಟಗಳಲ್ಲಿ ದೇವಸ್ಥಾನಗಳು, ಮಠಗಳು ಬಹುಪ್ರಮುಖ ಪಾತ್ರವಹಿಸಿವೆ. ಮಂತ್ರಾಲಯದ ಶಿಬಿರದ ಪ್ರಮುಖರಾದ ಪಾಂಡುರಂಗರಾಯರು ಮಂತ್ರಾಲಯ ಶಿಬಿರವನ್ನು ಅಲ್ಲದೆ ಅಂದಿನ ಗಂಗಾವತಿ ತಾಲೂಕಿನ ಕಂಪ್ಲಿ ಶಿಬಿರದಲ್ಲಿಯು ಜನಜಾಗೃತಿಯನ್ನು ಕುರಿತು ಪ್ರಪ್ರಥಮವಾಗಿ ಭಾಷಣವನ್ನು ಕೈಗೊಂಡರು. ಜನರಿಗೆ ಆಗುತ್ತಿದ್ದ ತೊಂದರೆಗಳನ್ನು, ತೊಂದರೆ ಕೊಡುತ್ತಿದ್ದ ರಜಾಕಾರರನ್ನು, ಪಠಾಣರನ್ನು ಹಣ್ಣುಗಾಯಿ ನೀರುಗಾಯಿ ಮಾಡುತ್ತಾ, ಅವರ ಕೈಯಲ್ಲಿದ್ದ ಕೈ ಬಾಂಬು, ಪಿಸ್ತೂಲು, ಸಿಡಿಸಿ ಲೂಟಿ ಮಾಡುತ್ತಾ ಪೊಲೀಸರಿಗೆ ಸಿಂಹಸ್ವಪ್ನರಾಗಿದ್ದರು. ಮಂತ್ರಾಲಯದ ಶಿಬಿರವು ಪ್ರಮುಖ ಪಾತ್ರವಹಿಸಿತ್ತು. ಗಂಗಾವತಿ ತಾಲೂಕಿನ ಜನರ ಜಾಗೃತಿಯನ್ನು ಕಂಪ್ಲಿ ಶಿಬಿರವು ವಹಿಸಿಕೊಂಡಿತ್ತು. ಕಂಪ್ಲಿ ಶಿಬಿರದ ಉಸ್ತುವಾರಿಯನ್ನು ಪ್ರಮುಖರಾದ ರಾಮಭಟ್ ಜೋಶಿಯವರು ನೋಡಿಕೊಳ್ಳುತ್ತಿದ್ದರು.

## ಕಲ್ಮಠ ಮಠದ ನೆರವು :

ರಾಘವೇಂದ್ರ ಸ್ವಾಮಿಗಳ ಮಂತ್ರಾಲಯ ಮಠ, ಇಲಕಲ್ ಮಹಾಂತ ಸ್ವಾಮಿಗಳ ಮಠ, ಹಾಗೆಯೇ ತೋಟದಾರ್ಯ ಅನ್ನದಾನಿಸ್ವಾಮಿ ಮಠ ಮುಂಡರಗಿ ಇವುಗಳು ಸ್ವತಂತ್ರ ಹೋರಾಟಕ್ಕೆ ನೆರವಾದಂತೆ ಗಂಗಾವತಿ ತಾಲೂಕಿನ ಕನಕಗಿರಿಯ ಕಲ್ಮಠ ಮಠವು ದೇಶದ ಹೋರಾಟಗಾರರಿಗೆ ತುಂಬಾ ನೆರವನ್ನು ಹಾಗೂ ರಕ್ಷಣೆಯನ್ನು ನೀಡಿದೆ. ಕಲ್ಮಠದ ಅಂದಿನ ಚನ್ನಬಸವ ಸ್ವಾಮಿಗಳು ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ಟೊಂಕಕಟ್ಟಿ ನಿಂತ ಕನಕಗಿರಿಯ ಯುವಕ ಜಯತೀರ್ಥ ರಾಜಪುರೋಹಿತರು ಮಠಕ್ಕೆ ಬಂದು 'ತಮ್ಮ ಸ್ನೇಹಿತರಾದ ಜಂತಕಲ್ ಅಡವಿರಾಯನು ಸತ್ಯಾಗ್ರಹ, ಸಂಘಟನೆ ಹಾಗೂ ಜಾಗೃತಿಯ ಕಾರ್ಯಕ್ರಮಕ್ಕೆ ಬಂದಿದ್ದಾರೆ. ಅವರನ್ನು ಹುಡುಕಿಕೊಂಡು ಪೊಲೀಸರು ಶೋಧ ನಡೆಸಿದ್ದಾರೆ. ಅವರು ನಮ್ಮ ಮನೆಯಲ್ಲಿ ರಕ್ಷಣೆ ಮಾಡಿದರೆ ಅನುಮಾನ ಬರುವುದೆಂದು, ಮಠದಲ್ಲಿ ಉಳಿದುಕೊಳ್ಳಲು ಅನುಕೂಲ ಮಾಡಬೇಕೆಂದು ಕೇಳಿದಾಗ, ಸ್ವಾಮಿಗಳು, 'ಚಿಂತೆ ಮಾಡಬೇಡಿ' ಎಂದು ಹೇಳಿ ಜಂತಕಲ್

ಅಡವಿರಾಯರಿಗೆ ಧೈರ್ಯ ಹೇಳಿ ಮಠದ ಮಹಡಿಯಲ್ಲಿ ಇಟ್ಟುಕೊಂಡು ಎರಡು ಮೂರು ದಿನ ಊಟೋಪಚಾರ ಮಾಡಿಸಿ,ಉಪಚರಿಸಿ, ಪೊಲೀಸರಿಂದ ರಕ್ಷಿಸಿದರು ಎಂದು ಸ್ವತಂತ್ರ ಹೋರಾಟಗಾರರಾದ ಜಯತೀರ್ಥ ರಾಜಪುರೋಹಿತರು ನೆನಪು ಮಾಡಿಕೊಳ್ಳುತ್ತಾರೆ. ಹೀಗೆ ಜನಸಾಮಾನ್ಯರ ನೋವು–ನಲಿವುಗಳಿಗೆ, ದೇಶದ ರಾಷ್ಟ್ರ ಭಕ್ತಿಗೆ, ಸ್ವಾತಂತ್ರ್ಯ ಹೋರಾಟಕ್ಕೆ ನಮ್ಮ ನಾಡಿನ ಮಠಗಳ ಕೊಡುಗೆ ಅನನ್ಯ.

**ಮರ್ಲಾನಹಳ್ಳಿ ಪ್ರಕರಣ:**

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿರುವ ಎಷ್ಟೋ ಗ್ರಾಮೀಣ ಹೋರಾಟಗಾರರು, ತ್ಯಾಗ ಜೀವಿಗಳು ಇತಿಹಾಸದಲ್ಲಿ ದಾಖಲಾಗದೇ ಇರುವುದು ವಿಷಾದನೀಯ. ಕಾವ್ಯ, ಲಾವಣಿ, ಹಾಡುಗಳ ಮೂಲಕ ಜನರ ಮಾತುಗಳ, ಮೂಲಕ ಅಲ್ಲದೆ ಊರಿನಲ್ಲಿ ಇರುವ ವೀರಗಲ್ಲುಗಳು, ವೀರಕಟ್ಟೆ ಕುರುಹುಗಳ ಮೂಲಕವೇ ಅವರ ಹೋರಾಟವನ್ನು ಗುರುತಿಸುವಂತಾಗಿದೆ. ಗಂಗಾವತಿ ತಾಲೂಕಿನ ಮರ್ಲಾನಹಳ್ಳಿ ಗ್ರಾಮದ ಮಹಿಳೆಯರು ರಜಾಕಾರರ ದಬ್ಬಾಳಿಕೆಗೆ ಹಾಗೂ ಮಾನಭಂಗಕ್ಕೆ ಒಳಗಾದಾಗ ಆ ಗ್ರಾಮದ ಹನುಮಂತಪ್ಪ ನಾಯಕ ಎನ್ನುವವರು ರಜಾಕಾರರ ವಿರುದ್ಧ ಹೋರಾಡುತ್ತಾ ಮಹಿಳೆಯರಿಗೆ ಆಗುತ್ತಿದ್ದ ತೊಂದರೆಯನ್ನು ತಪ್ಪಿಸುವಾಗ ರಜಾಕಾರರ ಗುಂಡಿನೇಟಿಗೆ ಬಲಿಯಾಗಿ ಹುತಾತ್ಮರಾಗಿದ್ದಾರೆ ಎಂದು ಗ್ರಾಮದ ಹನುಮಂತಪ್ಪ ಅವರು ನೆನಪಿಸಿಕೊಳ್ಳುತ್ತಾರೆ. ಈ ಬಗ್ಗೆ ಯಾವುದೇ ದಾಖಲೆಗಳು ಲಭ್ಯವಿಲ್ಲ. ಹೀಗೆ ದೇಶದ ವಿವಿಧ ಗ್ರಾಮಗಳಲ್ಲಿಯ ಜನರು ದೇಶಕ್ಕಾಗಿ ತಮ್ಮದೇ ಆದ ಕೊಡುಗೆಯನ್ನು ನೀಡಿರುವುದು ಅಂತಹ ಹೋರಾಟಗಾರರನ್ನು ಇತಿಹಾಸದಲ್ಲಿ ದಾಖಲಾಗದೇ ಇರುವುದನ್ನು ಕಾಣುತ್ತೇವೆ.

**ಹೋರಾಟದ ರೂಪರೇಷೆಗಳು:**

ಭಾರತದ ಸ್ವಾತಂತ್ರ್ಯಕ್ಕಾಗಿ ಮತ್ತು ನಿಜಾಮನ ವಿರುದ್ಧ ಹೋರಾಟದ ರೂಪರೇಷೆಗಳು ಈ ರೀತಿಯಾಗಿ ಇದ್ದವು. ನಿಜಾಮ ಸರ್ಕಾರದ ಎಲ್ಲಾ ಆಡಳಿತ ಕಾಯ್ದೆಗಳನ್ನು ಮುರಿಯುವುದು. ಸರ್ಕಾರದ ಕಾಗದ ಪತ್ರಗಳು



ಅಂದರೆ ಗೌಡರ ದಾಖಲೆಗಳನ್ನು ನಾಶ ಮಾಡುವುದು. ಅಬಕಾರಿ ಕಾಯ್ದೆ ಮುರಿದು ಗಡಿಯಲ್ಲಿರುವ ಎಲ್ಲಾ ಶೇಂದಿ ಅಂಗಡಿಗಳನ್ನು ಸುಟ್ಟು ನಾಶಪಡಿಸುವುದು. ಲೇವಿ ಎತ್ತುವುದನ್ನು ಮತ್ತು ವಸೂಲಿ ಮಾಡುವುದನ್ನು ನಿಲ್ಲಿಸುವುದು. ಜನರನ್ನು ಹೈದರಾಬಾದ್ ವಿಮೋಚನಗೊಳಿಸುವ ಬಗ್ಗೆ ಪ್ರಚೋದಿಸುವುದು. ಹಿಂದುಗಳು ನಿಜಾಂ ಸರ್ಕಾರದಲ್ಲಿ ಅಧಿಕಾರಿಗಳನ್ನು ರಾಜೀನಾಮೆ ಕೊಡುವಂತೆ ಮನವೊಲಿಸುವುದು. ಗಡಿ ಭಾಗದಲ್ಲಿನ ಜನರಿಗೆ ಪಠಾಣರು, ರಜಾಕಾರರು, ನಿಜಾಮ ಪೊಲೀಸರು ಮಾಡಿದಂತಹ ದಬ್ಬಾಳಿಕೆ, ಕಿರುಕುಳ, ಅತ್ಯಾಚಾರ, ಸುಲಿಗೆ, ಕೊಲೆ ಮುಂತಾದುವುಗಳನ್ನು ತಡೆಯಲು ಅವರೊಂದಿಗೆ ಹೋರಾಟ ಮಾಡಲು ಜನರನ್ನು ಸಂಘಟಿಸುವುದು. ಇವುಗಳಲ್ಲದೆ ರಾಷ್ಟ್ರಭಕ್ತಿ, ರಾಷ್ಟ್ರಾಭಿಮಾನ ಮತ್ತು ರಾಷ್ಟ್ರವನ್ನು ಪರಕೀಯರಿಂದ ಮುಕ್ತಿಗೊಳಿಸುವ ಮಹತ್ವದ ಗಾಂಧೀಜಿಯವರ ಉದ್ದೇಶವನ್ನು ಜನರ ಮನಸ್ಸಿಗೆ ತಲುಪಿಸುವುದಾಗಿತ್ತು.

**ಆನೆಗೊಂದಿ ಪ್ರಕರಣ:**

ಆನೆಗುಂದಿ ಪ್ರಸಿದ್ಧ ಐತಿಹಾಸಿಕ ಗ್ರಾಮ. ಅಲ್ಲಿ ನಿಜಾಮ ವಿರೋಧಿ ಚಳುವಳಿ ಬಲವಾಗಿತ್ತು. ಕಾಂಗ್ರೆಸ್ಸಿನ ಹಲವಾರು ಕಾರ್ಯಕರ್ತರು ಅಲ್ಲಿ ನಿಜಾಮನ ವಿರುದ್ಧ ಕೆಲಸ ಮಾಡುತ್ತಿದ್ದರು. ಯಾವಾಗ ನಿಜಾಮನ ವಿರುದ್ಧ ಜನರು ತಿರುಗಿಬಿದ್ದರು ಆಗಲೇ ಎಚ್ಚೆತ್ತುಕೊಂಡ ಹೈದರಾಬಾದಿನ ನಿಜಾಮರು ಜನರ ಮನಸ್ಸನ್ನು ತಣಿಸಲು ನಡುಗಾಲ ಸರ್ಕಾರವನ್ನು ರಚಿಸಲು ಮುಂದಾದರು. ಆಯಾ ಜಾತಿಯ ಮುಖಂಡರುಗಳನ್ನು ಮಂತ್ರಿಗಳನ್ನಾಗಿ ಮಾಡಿ ಚಳುವಳಿಯನ್ನು ಹತ್ತಿಕ್ಕಲು ಪ್ರಯತ್ನಿಸಿದರು. ಇದನ್ನು ಮನಗಂಡ ಆನೆಗೊಂದಿ ಗ್ರಾಮದ ಕಾಂಗ್ರೆಸ್ಸಿನ ಪ್ರಮುಖ ಕಾರ್ಯಕರ್ತ ಅನಂತಕೃಷ್ಣರವರು ಉಪಾಯ ಮಾಡಿ ಕತ್ತೆಗಳ ಮೇಲೆ ಹಾಳೆಗಳನ್ನು ಅಂಟಿಸಿ ಅದರ ಮೇಲೆ ಮಂತ್ರಿಗಳ ಹೆಸರು ಬರೆದರು. ನಂತರ ಗಂಗಾವತಿಯಲ್ಲಿ ಕತ್ತೆಗಳನ್ನು ಬಿಟ್ಟರು.ಜನರು ಕುಹಕವಾಗಿ ವ್ಯಂಗ್ಯದಿಂದ ನಕ್ಕು ಮಾತನಾಡತೊಡಗಿದರು. ಇದು ಕಾಂಗ್ರೆಸ್ಸಿನ ಅನಂತಕೃಷ್ಣನ ಕೆಲಸವೆಂದು ಸರ್ಕಾರಕ್ಕೆ ಗೊತ್ತಾಗಿ, ಆತನನ್ನು ಗುಲ್ಬರ್ಗಾ ಜೈಲಿನಲ್ಲಿಟ್ಟು, ಚಿತ್ರಹಿಂಸೆಯಿಂದ ಕೊಂದರೆಂದು ತಿಳಿಯುತ್ತದೆ.

**ರಾಷ್ಟ್ರಧ್ವಜ ಹಾರಿಸಿದ್ದರ ಪ್ರತಿಫಲ:**

೧೯೪೭ ಆಗಸ್ಟ್ ೧೫ ರಂದು ಇಡಿ ಭಾರತ ದೇಶಕ್ಕೆ ಸ್ವಾತಂತ್ರ್ಯ ಬಂದು ಎಲ್ಲರೂ ಸಂತೋಷದಲ್ಲಿದ್ದರೂ, ಹೈದ್ರಾಬಾದ್–ಕರ್ನಾಟಕ ಭಾಗದಲ್ಲಿ ನಿಜಾಮನ ಆಡಳಿತಕ್ಕೆ ಒಳಪಟ್ಟು ಜನಸಾಮಾನ್ಯರು ಸ್ವಾತಂತ್ರ್ಯದ ಖುಷಿಯನ್ನು ಅನುಭವಿಸುವಂತಿರಲಿಲ್ಲ. ರಾಷ್ಟ್ರಧ್ವಜವನ್ನು ಹಾರಿಸುವುದು ಅಪರಾಧವಾಗಿತ್ತು. 'ವಂದೇ ಮಾತರಂ' ಹೇಳುವುದಾದರೆ ನಿಜಾಮನ ಕೆಂಗಣ್ಣಿಗೆ ಗುರಿಯಾಗ ಬೇಕಾಗಿತ್ತು. ಗಂಗಾವತಿ ತಾಲೂಕಿನ ಕಾರಟಗಿಯಲ್ಲಿ ಭೀಮಸೇನರಾವ್ ಬೆಣಕಲ್ ಅವರು ರಾಷ್ಟ್ರಧ್ವಜ ಹಾರಿಸಿದರೆಂದು ಅವರನ್ನು ಬಂಧಿಸಿ ಗುಲ್ಬರ್ಗ ಜೈಲಿಗೆ ಕಳುಹಿಸಿದರು. ಅಲ್ಲಿ ಅವರಿಗೆ ಸಾಕಷ್ಟು ಚಿತ್ರ ಹಿಂಸೆ ಕೊಟ್ಟು ಕೊಲ್ಲಲಾಯಿತು. ಇವರ ಜೊತೆ ಗಂಗಾವತಿ ತಾಲೂಕಿನ ನಾಗರಹಳ್ಳಿ ಗ್ರಾಮದ ವೆಂಕೋಬ ಆಚಾರ್ಯ ಜೋಶಿ ಅವರನ್ನು ಬಂಧಿಸಿದರು. ದಿನಾಂಕ ೨೧ ನೇ ಸೆಪ್ಟಂಬರ್ ೧೯೪೭ ರಂದು ವೆಂಕಣ್ಣ ಶೆಟ್ಟಿಯವರು ಭಾಷಣ ಮಾಡಿದರು ಈ ಕಾರಣಕ್ಕಾಗಿ ಅವರನ್ನೂ ಬಂಧಿಸಿದರು.

**ಆಪರೇಷನ್ ಪೋಲೋ:**

ಭಾರತ ಸರ್ಕಾರವು ಪ್ರಥಮವಾಗಿ ಭಾರತೀಯರ ಮೇಲೆ ದಬ್ಬಾಳಿಕೆಯನ್ನು ಮಾಡುತ್ತಿದ್ದ ರಜಾಕಾರರನ್ನು, ಹತ್ತಿಕ್ಕಲು ಭಾರತ ಸೈನ್ಯಕ್ಕೆ ಆದೇಶ ನೀಡಿತು. ಇದರಿಂದಾಗಿ ಭಾರತದ ಅವಿಭಾಜ್ಯ ಅಂಗ ಹೈದರಾಬಾದ್ ಪ್ರಾಂತ್ಯದಲ್ಲಿ ರಜಾಕಾರರನ್ನು ತೀವ್ರವಾಗಿ ತಡೆಯಬೇಕು. ಹಿಂದೆ ಕೈಗೊಂಡ ಶಾಂತಿ ಒಪ್ಪಂದವನ್ನು ಯಥಾಸ್ಥಿತಿಯಲ್ಲಿ ಇರಬೇಕು. ಭೌಗೋಳಿಕವಾಗಿ, ಸಾಂಸ್ಕೃತಿಕವಾಗಿ ಹೈದರಾಬಾದ್ ಪ್ರಾಂತವು ಭಾರತದ ಅವಿಭಾಜ್ಯ ಅಂಗ. ಭಾರತವನ್ನು ಬಿಟ್ಟು ಹೈದರಾಬಾದ್ ಪ್ರಾಂತ್ಯ ವಿಶ್ವದಲ್ಲಿ ಗುರುತಿಸಿಕೊಳ್ಳಲು ಸಾಧ್ಯವಿಲ್ಲ ಎನ್ನುವುದು ಅಂದಿನ ಭಾರತದ ಸರ್ಕಾರದ ನಿಲುವಾಗಿತ್ತು. ಹಾಗಾಗಿ ಪಂಡಿತ್ ಜವಾಹರಲಾಲ್ ನೆಹರು, ಸರ್ದಾರ್ ವಲ್ಲಭಾಯಿ ಪಟೇಲ್ ಅವರೊಂದಿಗೆ ಆಪ್ತ ಸಮಾಲೋಚನೆಯನ್ನು ಮಾಡಿ, ಪೊಲೀಸ್ ಕಾರ್ಯಾಚರಣೆ ಮಾಡಲು ಇಬ್ಬರೂ ಅಭಿಪ್ರಾಯಪಡುತ್ತಾರೆ. ಆದರೆ ಕೂಡಲೇ ಅಂದಿನ ಪ್ರಧಾನಿಯವರು ಒಪ್ಪದಿದ್ದಾಗ ಗೌರ್ನರ್ ಜನರಲ್ ಚಕ್ರವರ್ತಿ ರಾಜಗೋಪಾಲಾಚಾರಿಯವರು ಸರ್ದಾರ್ ವಲ್ಲಭಬಾಯಿಯವರಿಗೆ ಮನವಿ ಮಾಡುತ್ತಾರೆ.ನಂತರ ಕಾರ್ಯಾಚರಣೆಗೆ ಸಿದ್ಧತೆಯನ್ನು ಮಾಡಿಕೊಳ್ಳುತ್ತಾರೆ.ನಂತರ ಆಪರೇಷನ್ ಪೋಲೋ ಕಾರ್ಯಾಚರಣೆ ಮಾಡಲಾಗುತ್ತದೆ. ಸೆಪ್ಟೆಂಬರ್ ೧೩ ಸೋಮವಾರ ೧೯೪೮ ರಂದು ಆದೇಶ ನೀಡಿ, ನೈಜವಾಗಿ ಸೇನಾ ಕಾರ್ಯಾಚರಣೆ ಎಂದು ಕರೆಯುತ್ತಾರೆ ಎಂದು ಇತಿಹಾಸದಲ್ಲಿ ದಾಖಲಾಗಿದೆ.



**ಹೈದ್ರಾಬಾದ ನಿಜಾಮನ ಶರಣಾಗತಿ:**

ನಿಜಾಮನ ಶರಣಾಗತಿಯ ನಂತರ ಭಾರತ ಸರ್ಕಾರವು ಕೈಗೊಂಡ ಹೈದರಾಬಾದ್ ಪೊಲೀಸ್ ಕ್ರಮದಿಂದ ಹೈದರಾಬಾದಿನ ರಕ್ಷಣೆಯಾಗಿದೆ. ಇದರಿಂದ ಇಡೀ ದಕ್ಷಿಣ ಭಾರತವನ್ನು ಅಪಾಯದಿಂದ ಪಾರಾಯಿತು ಎಂದು ಇತಿಹಾಸಕಾರರು ಗುರುತಿಸುತ್ತಾರೆ. ೧೭ ನೆಯ ಸೆಪ್ಟೆಂಬರ್ ೧೯೪೮ ರಂದು ನಿಜಾಮನ ಉಸ್ತುವಾರಿಯ ಲಿಯಾಕತ್‌ಅಲಿ ಸಚಿವ ಸಂಪುಟ ತನ್ನ ರಾಜೀನಾಮೆ ನೀಡಿದ ಬಳಿಕ. ಎಲ್ಲಾ ರಾಷ್ಟ್ರೀಯ ಹೋರಾಟದ ನಾಯಕರನ್ನು ಬಿಡುಗಡೆ ಮಾಡಲಾಯಿತು. ಹೈದರಾಬಾದ್ ಪಡೆಗಳ ದಂಡನಾಯಕ ಜನರಲ್ ಸೈಯದ್ ಅಹಮದ್ ಎಡ್ರೂಸ್‌ನ ಸೈನ್ಯವು ಸಂಜೆ ಐದು ಗಂಟೆಗೆ ಭಾರತೀಯ ಸೈನ್ಯಕ್ಕೆ ಶರಣಾಗತರಾಗುತ್ತಾರೆ. ನಂತರ ನಮ್ಮ ಭಾಗದಲ್ಲಿ ರಮಾನಂದತೀರ್ಥರ ಹಾಗೂ ಇನ್ನಿತರ ಕಾಂಗ್ರೆಸ್ ಕಾರ್ಯಕರ್ತರ ಬಿಡುಗಡೆಯಾಗುತ್ತದೆ. ಈ ಭಾಗದಲ್ಲಿ ಕೋಮುಗಲಭೆಗಳಾಗುತ್ತಿದ್ದಂತೆ ಶಾಂತಿಯನ್ನು ಕಾಪಾಡಲು ಕಾಂಗ್ರೆಸ್ ಕಾರ್ಯಕರ್ತರು ಅವಿರತವಾಗಿ ಶ್ರಮಿಸುತ್ತಾರೆ. ಹೈದರಾಬಾದ್ ಸಂಸ್ಥಾನವನ್ನು ಭಾರತದ ಒಕ್ಕೂಟದೊಂದಿಗೆ ವಿಲೀನಗೊಳಿಸುವ ಒಪ್ಪಂದಕ್ಕೆ ನಿಜಾಮನು ೧೮ ರಂದು ಸಹಿ ಹಾಕಿದನು. ಸೆಪ್ಟೆಂಬರ್ ೧೯ರಂದು ಕಾಸಿಂ ರಜ್ವಿಯನ್ನು ಬಂಧಿಸಲಾಯಿತು. ನಂತರ ಏಳು ವರ್ಷಗಳ ಕಾಲ ಶಿಕ್ಷೆ ಪಡೆದು ಭಾರತ ಸರ್ಕಾರದ ಕಣ್ಣು ತಪ್ಪಿಸಿ ಪಾಕಿಸ್ತಾನಕ್ಕೆ ಓಡಿಹೋದನು. ಮುಂದೆ ನಿಜಾಮನು ೨೬ನೆಯ ಸೆಪ್ಟೆಂಬರ್ ೧೯೪೮ ರಂದು ವಿಶ್ವಸಂಸ್ಥೆಗೆ ಶಾಂತಿಯ ಬಗ್ಗೆ ತಂತಿ ಸಂದೇಶವನ್ನು ನೀಡಿ ನಿಜಾಮನು ಹೈದರಾಬಾದನ ಮೊಕ್ಕದ್ದಮೆಯನ್ನು ವಾಪಸ್ ಪಡೆಯುತ್ತಾನೆ. ನಂತರ ಜನರಲ್ ಜಿ ಎನ್ ಚೌಧರಿಯವರು ಹೊಸ ಹೈದ್ರಾಬಾದ್ ರಾಜ್ಯದ ಮಿಲಿಟರಿ ಗೌರ್ನರ್‌ನನ್ನು ನೇಮಿಸಿದರು.

## ಗಂಗಾವತಿ ತಾಲೂಕಿನ ಪ್ರಮುಖ ಸ್ವತಂತ್ರ ಹೋರಾಟಗಾರರು:

ಶ್ರೀರಾಮಭಟ್ ಜೋಷಿ, ಶ್ರೀ ಕೇಶವರಾವ್ ಶ್ರೀಖಂಡೆ, ಶ್ರೀ ಜಯತೀರ್ಥ ರಾಜಪುರೋಹಿತ, ಶ್ರೀ ಬಿ ಮರಿಯಪ್ಪ, ಶ್ರೀ ಆರ್ ಎಂ ಗಂಗಾವತಿ, ಶ್ರೀ ಅನಂತಕೃಷ್ಣ ಆನೆಗೊಂದಿ, ಶ್ರೀ ಕೋದಂಡರಾಮ, ಶ್ರೀ ಬಿ ಎಂ ಅಂಗಡಿ, ಶ್ರೀ ಕಲ್ಲಿಗನಾಥ ಹಿರೇಮಠ್ ನವಲಿ, ಶ್ರೀ ಚಳ್ಳೂರು ರಾಘವೇಂದ್ರರಾವ್ ಕುಲಕರ್ಣಿ, ಶ್ರೀ ರಾಮಾಚಾರಿ ಮಾಸ್ಟರ್ ನವಲಿ, ಶ್ರೀ ರಾಘವೇಂದ್ರ ಆಚಾರ್ಯ ಅಯೋಧ್ಯ, ಅಕ್ಬರ್ ತಿರುಮಲರಾವ್, ಶ್ರೀರಾಮಾಚಾರ್ಯ ಅಯೋಧ್ಯ, ಶ್ರೀಗೌಳಿ ಮಹದೇವಪ್ಪ, ನವಲಿ ಶ್ರೀ ವೇದವ್ಯಾಸರಾವ್, ಶ್ರೀ ರಾಚಪ್ಪ ಅರಳಿ, ಶ್ರೀ ಬಿ ಜಗದೀಶಪ್ಪ, ಶ್ರೀ ಭೀಮಸೇನ್‌ರಾವ್ ಗೋಗಿ, ಶ್ರೀ ನಾರಾಯಣರಾವ್ ದೇಶಪಾಂಡೆ.

## ವಿವರ ದೊರೆಯದ ಸ್ವಾತಂತ್ರ್ಯ ಹೋರಾಟಗಾರರು:

ರುದ್ರಗೌಡ ನಂದಿಹಳ್ಳಿ ಕಾರಟಗಿ, ಗುಂಡೂರು ತಿರುಮಲರಾವ್, ಮಾಧವಾಚಾರ್ಯ ಜಾಗಿರ್ದಾರ್, ಹನುಮಂತಪ್ಪ, ಬಸ್ಸಪ್ಪ ಆನೆಗೊಂದಿ, ನೀಲಕಂಠಯ್ಯ ಗೋರೆಬಾಳ, ಮಹಾಂತಯ್ಯ ಸ್ವಾಮಿ ಹಿರೇಮಠ, ಕೊಪ್ರೇಶ್ಚಾರ್ಯ ರಾಜಪುರೋಹಿತ, ಗುಂಜಳ್ಳಿ ಬಸಣ್ಣ, ಅಕ್ಬರ್ ಭೋಗೇಶ್‌ರಾವ್, ನವಲಿ ಗುರುರಾಜ್ ತಂದೆ ಶ್ರೀನಿವಾಸ, ಸುಗಂಧಿ ರಾಜಪ್ಪ, ಸು.ರಾ ಪಂಪಣ್ಣ, ಕೋಟೆ ಗುರಾಚಾರ್ಯ, ಮುಸ್ಟೂರು ಶ್ರೀನಿವಾಸರಾವ್, ವೆಂಕೋಬಾಚಾರ್ಯ ಯರಡೋಣಿ, ರಾಧಾಕಿಸನ್ ಸಿಂಗ್, ಕೃಷ್ಣಾಚಾರ್ ಜೋಶಿ, ಅಕ್ಬರ್ ಕಲ್ಯಾಣರಾವ್ ಕುಲಕರ್ಣಿ, ರಾಮರಾವ್ ತಿರುಮಲರಾವ್ ಕಾರಟಗಿ, ಜಂತ್ಕಲ್ ಅಡವಿರಾವ್ ಕುಲಕರ್ಣಿ, ವೆಂಕನಗೌಡ ತಾವರಗೇರಿ, ಪ್ರಹ್ಲಾದರಾವ್ ಅಕ್ಬರ್, ಕಿಶನ್‌ರಾವ್ ದೇಸಾಯಿ ಮರಕಮದಿನ್ನಿ, ಒಡೆಯರ ಕನಕಪಾಚಾರ್ಯ, ನೀಲಕಂಠಯ್ಯ ಗೋರೆಬಾಳ.

## ಸ್ವಾತಂತ್ರ್ಯ ಹೋರಾಟಕ್ಕೆ ಪ್ರತಿರೋಧ ಒಡ್ಡಿದವರು:

ರಜಾಕಾರರು, ನಿಜಾಮರು, ಬ್ರಿಟಿಷರ ವಿರುದ್ಧ ದೇಶಾದ್ಯಂತ ಒಂದು ಕಡೆ ಹೋರಾಟ ನಡೆದರೆ, ಇನ್ನೊಂದು ಕಡೆ ಹೋರಾಟಗಾರರನ್ನೇ ಹೈಜಾಕ್ ಮಾಡಿ ಹೋರಾಟಗಾರರ ಸುಳಿವುಗಳನ್ನು ಹೈದ್ರಾಬಾದ್ ನಿಜಾಮನಿಗೆ, ರಜಾಕಾರರಿಗೆ, ಬ್ರಿಟಿಷರಿಗೆ ನಮ್ಮವರೇ ಮಾಹಿತಿ ನೀಡುತ್ತಿದ್ದುದು ವಿಷಾದನೀಯ. ವಿಶೇಷವಾಗಿ ಜಿಲ್ಲೆಯ ಬೇರೆ ಬೇರೆ ಸ್ಥಳಗಳಲ್ಲಿ ಇಂತಹ ಪ್ರಕರಣಗಳು ಸಾಕಷ್ಟು ನಡೆದಿದ್ದವು. ಆದರೆ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನಲ್ಲಿ ನವಲಿ ಗ್ರಾಮದಲ್ಲಿ ಮಾತ್ರ ಪೊಲೀಸ್‌ಗೌಡ, ಮಾಲಿಗೌಡ ಹಾಗೂ ಕುಲಕರ್ಣಿಯವರು ಅಘೋಷಿತ ರಾಜೀನಾಮೆ ಕೊಟ್ಟಂತೆ, ಮೂಕಪ್ರೇಕ್ಷಕರಾಗಿ ಉಳಿಯದೆ ಹೋರಾಟಕ್ಕೆ ಕುಮ್ಮಕ್ಕು ನೀಡಿ ಸ್ವತಃ ಭಾಗವಹಿಸಿರುವುದು ಸತ್ಯ. ಹಾಗೆ ಬರಗೂರಿನಲ್ಲಿ ಪೊಲೀಸ್ ಗೌಡರು ಸ್ವಾತಂತ್ರ್ಯ ಯೋಧರನ್ನು ಹಿಡಿದು ಹಾಕಿ ಗಂಗಾವತಿ ಪೊಲೀಸ್ ಠಾಣೆಗೆ ಒಪ್ಪಿಸಿದ್ದು, ಈ ತಾಲೂಕಿನ ಗೌಡ ಕುಲಕರ್ಣಿಗಳು ನಿಜಾಮನಿಗೆ ನಿಷ್ಠೆ ಉಳ್ಳವರಾಗಿಯೂ, ಸ್ವಾತಂತ್ರ್ಯ ಹೋರಾಟಗಾರರನ್ನು ಎದುರು ಹಾಕಿಕೊಳ್ಳುವ ಪರಿಸ್ಥಿತಿಯಲ್ಲಿದ್ದರೂ ಜನರು ಮಾತ್ರ ಸ್ವಾತಂತ್ರ್ಯ ಹೋರಾಟಗಾರರ ಪರವಾಗಿರುವುದು ತಿಳಿದುಬರುತ್ತದೆ. ಕೊಪ್ಪಳ ನಾಡಿನ ಜನತೆ ಹೋರಾಟಕ್ಕೆ ಸಿದ್ಧರಿದ್ದು, ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ತಿರುವನ್ನು ಕೊಟ್ಟರು.

❑

## ಆಧಾರ ಗ್ರಂಥಗಳು


೧. ಕೊಪ್ಪಳ ನಾಡಿನ ಸ್ವಾತಂತ್ರ್ಯ ಹೋರಾಟ– ರಾಮಣ್ಣ ಹವಳೆ.

೨. ವಿಮೋಚನೆ –ಕೊಪ್ಪಳ ಜಿಲ್ಲೆಯ ಹೈದ್ರಬಾದ ವಿಮೋಚನಾ ಹೋರಾಟದ ಕಥೆ–ಜಿಲ್ಲಾಡಳಿತ ಕೊಪ್ಪಳ.

೩. ಕೊಪಣ ಸಿರಿ–ಕೊಪ್ಪಳ ಜಿಲ್ಲಾ ಅಧ್ಯಯನ. ೭೮ ನೇ ಅಖಿಲ ಭಾರತ ಸ್ಮರಣ ಸಂಚಿಕೆ.

೪. ವಿ ಎಚ್ ದೇಸಾಯಿಯವರ ವಂದೇ ಮಾತರಂ ದಿಂದ ಜನಗಣ ಮನದವರೆಗೆ.

೫. ಕೊಪ್ಪಳ ಜಿಲ್ಲೆಯ ಅಂಕಿ ಸಂಖ್ಯೆಯ ನೋಟ–೨೦೧೮–೧೯.

೬. ನಮ್ಮ ನೆಲೆ : ನಮ್ಮ ಸಂಸ್ಕೃತಿ– ಪ್ರಕಾಶನ : ಸಂಕಲ್ಪ ಎಜ್ಯುಕೇಷನ್ ಟ್ರಷ್ಟ್ (ರಿ) ಗಂಗಾವತಿ.

೭. ರಜಾಕಾರರ ಲಾವಣಿ– ಪ್ರಕಾಶಕರು ಪ್ರಸಾರಾಂಗ ಕನ್ನಡ ಹಂಪಿ ವಿಶ್ವವಿದ್ಯಾಲಯ ಹಂಪಿ.


**ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ**
**ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ**

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಜ ಶೆಟ್ಟಿ | ೩೦/– |

| | | | |
|---|---|---|---|
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |



| | | | |
|---|---|---|---|
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ಕೇಂದ್ರ ಮೈದಾನ | ಡಾ. ವಸಂತಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |

| | | | |
|---|---|---|---|
| ೪೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೪೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೪೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೪೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೪೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೪೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೪೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೫೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೫೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೫೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೫೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೫೪. | ಕೂಡ್ಲಿಗಿ | ಡಾ. ಕೆ. ಸತೀಶ | ೩೦/– |
| ೫೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೫೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೫೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೫೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೫೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |



| | | | |
|---|---|---|---|
| ೬೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೬೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೬೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೬೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೬೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |

❖ ❖ ❖